www.divinegen.org

ದೇವರ ಸ್ವರ
ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ - 9 ಸಂಚಿಕೆ - 4 ಎಪ್ರಿಲ್ 2013
Volume : IX Issue : IV April 2013

Editor, Publisher, Printer
& Owned by :
**Sunil John D'souza**
S/o Sri Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Devine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

ಒಳ ಪುಟಗಳಲ್ಲಿ

1. ಪ್ರಕಟಣೆ
2. ಆತ್ಮೀಕ ಬೆಳವಣಿಗೆ – ವಯಸ್ಕರ ಸ್ವರ
3. ವಿಶೇಷ ಸೂಚನೆಗಳು
4. ಆರೋಗ್ಯ ಸ್ವರ
5. ಪ್ರಶ್ನೋತ್ತರಗಳ ಸ್ವರ
6. ಸ್ಥಳೀಯ ಮತ್ತು ವಿದೇಶ ಸುದ್ದಿ
7. ಅನಾಥರ ಸ್ವರ
8. ಪ್ರಾರ್ಥನಾ ಸ್ವರ
9. ತಿಳುವಳಿಕೆಯ ಸ್ವರ
10. ಇಸ್ರಾಯೆಲ್
11 ಜಾಹೀರಾತು
12. ಮಹಿಳೆಯರ ಸ್ವರ
13. ನಂಬಿಕೆಯ ಪ್ರತಿಫಲ
14. ಮಕ್ಕಳ ಸ್ವರ

## ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸುಕ್ರಿಸ್ತನ ಪರಿಶುದ್ಧ ನಾಮದಲ್ಲಿ ಪ್ರಿಯ ವಾಚಕರೆಲ್ಲರಿಗೂ ನನ್ನ ಆತ್ಮೀಯ ವಂದನೆಗಳು.

ಲೋಕದಲ್ಲಿ ನಡೆಯುವ ಘಟನೆಗಳನ್ನು ಗಮನಿಸುವುದಾದರೆ ಕರ್ತನಾದ ಯೇಸುಕ್ರಿಸ್ತನ ಬರೋಣವು ಹತ್ತಿರವಾಗಿದೆ. ಎಂದು ತಿಳಿದುಕೊಳ್ಳಬಹುದು. ಅದಕ್ಕಾಗಿ ನಮ್ಮ ಜವಾಬ್ದಾರಿ ಮತ್ತು ಸಿದ್ಧತೆಯನ್ನು ಅರಿತುಕೊಳ್ಳುವುದು ಅತೀ ಪ್ರಾಮುಖ್ಯವಾದ್ದದು.

1. ಸುವಾರ್ತೆ ಸಾರುವುದು
2. ಸಾಕ್ಷಿಯಾಗಿ ಜೀವಿಸುವುದು
3. ಲೋಕದ ಜನರ ಆತ್ಮ ರಕ್ಷಣೆಗಾಗಿ ಪ್ರಾರ್ಥಿಸುವುದು
4. ನಂಬಿಕೆಯಲ್ಲಿ ದೃಢವಾಗಿ ನಿಲ್ಲುವುದು
5. ಪರಿಶುದ್ಧವಾಗಿ ಜೀವಿಸುವುದು
6. ಜನರನ್ನು ರಕ್ಷಣೆಗೆ ನಡೆಸುವುದು
7. ಯೇಸುವನ್ನು ಎದುರುಗೊಳ್ಳಲು ದೇವ ಜನರನ್ನು ಸಿದ್ಧಪಡಿಸುವುದು.

ಅನೇಕರು ದೇವ ಮಕ್ಕಳು ಇಂದು ಬೇಜವಾಬ್ದಾರಿಯಿಂದಲೂ, ಸ್ವಾರ್ಥದಿಂದಲೂ, ನಿರ್ಲಕ್ಷದಿಂದಲೂ ಜೀವಿಸುವುದರಿಂದ ಲೋಕವು ನಾಶನದ ಕಡೆಗೆ ಸಿಗುತ್ತಿದೆ. **"ಸಜ್ಜನರು ನಾಶವಾಗುತ್ತಾರೆ, ಯಾರೂ ಮನಸ್ಸಿಗೆ ತಾರರು; ಸದ್ಭಕ್ತರು ಗತಿಸುತ್ತಾರೆ, ಆಹಾ, ಶಿಷ್ಟರು ಕೇಡಿನಿಂದ ಪಾರಾಗಿದ್ದಾರೆ ಎಂದು ಯಾರೂ ಯೋಚಿಸರು. ಇವರು ಸಮಾಧಾನದಲ್ಲಿ ಸೇರಿದ್ದಾರಲ್ಲಾ; ನೆಟ್ಟಗೆ ನಡೆಯುವ ಪ್ರತಿಯೊಬ್ಬನು ತನ್ನ ತನ್ನ ದೀರ್ಘನಿದ್ರಾಸ್ಥಾನದಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದಾನೆ"** (ಯೆಶಾ. 57:1–2). ಆತ್ಮಭಾರದೊಂದಿಗೆ ಕಿಂಚಿತ್ತಾದರೂ ದೇವರ ಸೇವೆ ಮಾಡೋಣ, ಬೆಂಕಿಗೆ ಹೋಗುವಂಥ ಆತ್ಮಗಳನ್ನು ರಕ್ಷಿಸೋಣ. ಕರ್ತನಾದ ಯೇಸುಕ್ರಿಸ್ತನ ಹೃದಯದ ಬಡಿತವನ್ನು ಹತ್ತಿರದಿಂದ ಅರಿತುಕೊಳ್ಳಬೇಕಾಗಿದೆ. ನಾಶವಾಗುತ್ತಿರುವ ಆತ್ಮಗಳಿಗಾಗಿ ಆತನು ದು:ಖಿಸುತ್ತಿದ್ದಾನೆ. ಆತನ ಬರೋಣದಲ್ಲಿ ಯಾರೂ ಕೈ ಬಿಡಲ್ಪಡಬಾರದು. ನಾನು, ನೀವು ಜೀವಿಸುವ ದಿನಗಳು ದೇವರಿಂದ ಕೊಡಲ್ಪಟ್ಟ ಕೃಪೆಯ ಸಮಯವಾಗಿದೆ. ಯೆಶಾ. 6:8 ರಲ್ಲಿ ಯೆಶಾಯ ಪ್ರವಾದಿಗೆ ಕರ್ತನು ನನಗಾಗಿ ಹೋಗುವವರು ಯಾರು ಎಂದು ಕೇಳಿದನು. ಕರ್ತನಿಗೆ ಇಂದು ನಾನು ಸಿದ್ಧನಾಗುತ್ತೇನೆ ಹಾಗೂ ಸಿದ್ಧಪಡಿಸುತ್ತೇನೆ ಕರ್ತನೆ ಎಂದು ಹೇಳೋಣ.

ಕರ್ತನು ನಿಮ್ಮನ್ನು ಆಶೀರ್ವದಿಸಲಿ.

*ಹಿರಿಯ ಸಂಪಾದಕ*

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

2 ಕೊರಿ. 6:2 ಪ್ರಸನ್ನತೆಯ ಕಾಲದಲ್ಲಿ ನಿನ್ನ ಮನವಿಯನ್ನು ಕೇಳಿದೆನು, ರಕ್ಷಣೆಯ ದಿನದಲ್ಲಿ ನಿನಗೆ ಸಹಯ ಮಾಡಿದೆನು ಎಂದು ದೇವರು ಹೇಳುತ್ತಾನಲ್ಲಾ! ಈಗಲೇ ಆ ಸುಪ್ರಸನ್ನತೆಯ ಕಾಲ ಇದೇ ಆ ರಕ್ಷಣೆಯ ದಿನ.

ಈ ಸ್ಥಳದ ವಿಶಾಲತೆ ಅಥವಾ ಪರಿದಿ :– (ಜ್ಞಾನೋ. 27:20) **"ಪಾತಾಳಕ್ಕೂ ನಾಶಲೋಕಕ್ಕೂ ಹೇಗೆ ತೃಪ್ತಿಯಿಲ್ಲವೋ ಹಾಗೇ ಮನುಷ್ಯನ ಕಣ್ಣುಗಳಿಗೆ ತೃಪ್ತಿಯಿಲ್ಲ."**

4) **ಭೂಮಿಯ ಕೆಳಗಿನ 4ನೇ ಭಾಗ ನರಕ :–** ನರಕಕ್ಕೆ ಬಳಸಿದ ಇಬ್ರಿಯ ಪದ ಗೆಹೆನ್ನಾ, ನರಕಕ್ಕೆ ಬಳಸಿದ ಗ್ರೀಕ್ ಪದ ಅಮ್ನೆನ್ ಟೌ ಪುರೋಸು ಅಂದರೆ ಬೆಂಕಿಯ ಕೆರೆ ಎಂದು ಅರ್ಥ. ನರಕದಲ್ಲಿ ಇನ್ನು ಯಾರನ್ನು ಹಾಕಿಲ್ಲ ಅದು ಕೇವಲ ಸಿದ್ಧಮಾಡಿ ಇಡಲ್ಪಟ್ಟಿದೆ. ನರಕವನ್ನು ಸಿದ್ಧಮಾಡಿದ್ದು ಸೈತಾನ ಮತ್ತು ಅವನ ದೂತರಿಗಾಗಿ ಮತ್ತಾ. 25:45. ಮನುಷ್ಯನು ಮಾನಸಾಂತರಪಟ್ಟಿ ದೇವರ ಕಡೆಗೆ ತಿರುಗಿಕೊಳ್ಳಲು ಇಷ್ಟಪಡದ್ದರಿಂದಾಗಿ ನರಕಕ್ಕೆ ಹೋಗಲು ಆರಿಸಿಕೊಂಡನು. (ಅ.ಕೃ. 1:24, ಮತ್ತಾ. 25:41). ಅನೇಕರು ನರಕವೇ ಇಲ್ಲಾ ಎಂದು ವಾದಿಸುತ್ತಾರೆ ಹಾಗೂ ಪ್ರೀತಿಸ್ವರೂಪನಾದ ದೇವರು ತಾನು ಸೃಷ್ಟಿಸಿದ ಮನುಷ್ಯನನ್ನು ನರಕದಲ್ಲಿ ಹಾಕುವನೇ ಎಂದು ಹೇಳುತ್ತಾರೆ. ದೇವರ ಒಂದು ಮುಖ ಪ್ರೀತಿಸ್ವರೂಪನಾಗಿದ್ದಾನೋ ಹಾಗೆಯೇ ಇನ್ನೊಂದು ಮುಖ ದಹಿಸುವ ಅಗ್ನಿ. ಈ ಎರಡು ಮುಖಗಳನ್ನು ಕಾಲಕ್ಕೆ ತಕ್ಕಂತೆ ಆತನು ಪ್ರಕಟಿಸುವನು.

**ನಿತ್ಯ ನರಕ ಹಾಗೂ ನಿತ್ಯ ಶಿಕ್ಷೆ :**

1) ನಿತ್ಯ ಬೆಂಕಿ ಇರುವ ಸ್ಥಳವೇ ನರಕ (ಮತ್ತಾ. 25:41).
2) ನಿತ್ಯ ಶಿಕ್ಷಿಸಲ್ಪಡುವ ಸ್ಥಳವೇ ನರಕ (ಮತ್ತಾ. 25:46).
3) ನಿತ್ಯ ನಾಶನವೆಂಬ ದಂಡನೆಯ ಸ್ಥಳವೇ ನರಕ. (2 ಥೆಸ. 2:10)
4) ಅರದ ಬೆಂಕಿ ಇರುವ ಸ್ಥಳವೇ ನರಕ (ಮಾರ್ಕ. 9:43, ಯೆಶಾ. 66:24).
5) ನರಕದಲ್ಲಿ ಕಡಿಯುವ ಹುಳ ಸಾಯುವುದಿಲ್ಲ, ಇಲ್ಲಿ ಕಡಿಯುವ ಹುಳವನ್ನು ಸಾಯಿಸಬಹುದು (ಮಾರ್ಕ. 9:48).
6) ಬೆಂಕಿಯ ಕೆರೆಯೇ ನಿತ್ಯನರಕ (ಪ್ರಕ. 20:13–15).
7) ಉಪಶಮನವಿಲ್ಲದ ನಿತ್ಯಯಾತನೆಯ ಸ್ಥಳವೇ ನರಕ (ಪ್ರಕ. 14:10–11).
8) ಹಗಲಿರುಳು ಯುಗಯುಗಾಂತರಕ್ಕೂ ಯಾತನೆ ಪಡುವ ಸ್ಥಳವೇ ನರಕ (ಪ್ರಕ.20:10). ಇದನ್ನು ಓದುತ್ತಿರುವ ಪ್ರೀತಿಯ ಸಹೋದರನೇ , ಸಹೋದರಿಯೇ ನರಕಕ್ಕೆ ಹೋಗಲು ಇಷ್ಟಪಡಬೇಡ. ನಿನಗಾಗಿ ಕರ್ತನಾದ ಯೇಸುಕ್ರಿಸ್ತನು ನಿತ್ಯನಿತ್ಯಕ್ಕೂ ಸಂತೋಷ ಇರುವ ಸ್ಥಳವನ್ನು ಸಿದ್ಧಮಾಡಿದ್ದಾನೆ. ಆ ಸ್ಥಳಕ್ಕೆ ಹೋಗಲು ತವಕಪಡು. ಯೇಸು ನಿನ್ನನ್ನು ಪ್ರೀತಿಸುತ್ತಾನೆ, ಕ್ಷಮಿಸುತ್ತಾನೆ. ಯೇಸು ನೀನಿರುವ ಪಾಪದ ಕೆಸರಿನಿಂದ ಮೇಲಕ್ಕೆತ್ತಲು ಸಹಾಯ ಮಾಡುತ್ತಾನೆ. ನಿನ್ನನ್ನು ಪ್ರೀತಿಸುವ ಯೇಸುವನ್ನು ನೋಡಿ ಓಡಿ ಬರುವಿಯಾ? ನಿತ್ಯ ನರಕಕ್ಕೆ ತಪ್ಪಿಸಿಕೊಳ್ಳುವಿಯಾ? ನಿನ್ನನ್ನು ನೋಡಿ ಯೇಸುಕ್ರಿಸ್ತನು ಹೇಳುತ್ತಿದ್ದಾನೆ, ನನ್ನನ್ನು ತೊರೆದು ಮನಸ್ಸು ಬಂದ ಹಾಗೆ ದುರ್ಮಾರ್ಗದಲ್ಲಿ ನಡೆಯುವ ಜನರನ್ನು ನಾನು ದಿನವೆಲ್ಲಾ ಕೈಚಾಚಿ ಕರೆದೆನು. ಯೆಶಾ. 65:2. ಲೂಕ. 19:10 ಮನುಷ್ಯ ಕುಮಾರನು ಕೆಟ್ಟು ಹೋಗಿರುವುದನ್ನು ಹುಡುಕಿ ರಕ್ಷಿಸುವುದಕ್ಕೆ ಬಂದನು ಎಂದು ಹೇಳಿದನು. ಪ್ರಕ. 3:20 ಇಗೋ ಬಾಗಿಲಲ್ಲಿ ನಿಂತುಕೊಂಡು (ಹೃದಯದ ಬಾಗಿಲಲ್ಲಿ) ತಟ್ಟುತ್ತಾ ಇದ್ದೇನೆ. ಯಾವನಾದರೂ ನನ್ನ ಶಬ್ದವನ್ನು ಕೇಳಿ ಬಾಗಿಲನ್ನು ತೆರೆದರೆ ನಾನು ಒಳಗೆ ಬಂದು ಅವನ ಸಂಗಡ ಊಟ ಮಾಡುವೆನು ಅವನು ನನ್ನ ಸಂಗಡ ಊಟ ಮಾಡುವನು.

5) ಭೂಮಿಯ ಕೆಳಗಿನ 5ನೇ ಭಾಗವೇ ಅಧೋಲೋಕ ತಳ ಇಲ್ಲದ ಭೂಮಿ. ಪ್ರಕ. 9:1 ಇದರಲ್ಲಿ ಸಾವಿರ ವರ್ಷದ ಯೇಸುಕ್ರಿಸ್ತನ ಆಳ್ವಿಕೆಯಲ್ಲಿ ಸೈತಾನನ್ನು ಬಂಧಿಸಿ ಅಧೋಲೋಕವೆಂಬ ಸೆರೆಮನೆಯಲ್ಲಿ ಹಾಕುವರು. ಪ್ರಕ.

ನಾನು ನಿರ್ಮಿಸಿದ ಬೇರೆ ಎಲ್ಲಾ ಜನಾಂಗಗಳಿಗಿಂತಲೂ ಇವರಿಗೆ ಹೆಚ್ಚಾದ ಕೀರ್ತಘನಮಾನಗಳನ್ನು ಉಂಟುಮಾಡುವೆನು (ಧರ್ಮೋ. 26:19).

20:1 ಇದರಲ್ಲಿ ಒಂದು ಸಲ ಹಾಕಿದರೆ ಕೆಳಗೆ ಹೋಗುತ್ತಾ ಇರುತ್ತಾರೆ, ತಳ ಸಿಗುವುದಿಲ್ಲ. ಅಧೋಲೋಕ ಅಂದರೆ – ದುರ್ಭೂತಗಳ ವಾಸಸ್ಥಳ ಇದರ ಅಧಿಕಾರಿ – ಅಬದ್ದೋನ ಅಂದರೆ ಸೈತಾನ.

6) ಹೊಸ ಒಡಂಬಡಿಕೆಯ ಭಕ್ತರ ಆತ್ಮಗಳ ವಿಶ್ರಾಂತಿ ಸ್ಥಳ ಎಫೆ. 4:6–7–9 ಹಳೆ ಒಡಂಬಡಿಕೆಯಲ್ಲಿ ಭಕ್ತರ ಆತ್ಮಗಳು ವಿಶ್ರಮಿಸುವ ಸ್ಥಳ ಭೂಮಿಯ ಕೆಳಭಾಗದಲ್ಲಿ ಅಂದರೆ ಪಾತಾಳದ ಮೇಲಿನ ಭಾಗದಲ್ಲಿ ಮತ್ತು ಕರ್ತನಾದ ಯೇಸುಕ್ರಿಸ್ತನು ಸಾಯುವುದಕ್ಕೆ ಮುಂಚೆ ತನ್ನ ಬದಿಯಲ್ಲಿ ತೂಗು ಹಾಕಲ್ಪಟ್ಟ ಕಳ್ಳನು ಪಶ್ಚಾತ್ತಾಪಪಟ್ಟಾಗ ಕರ್ತನಾದ ಯೇಸುಕ್ರಿಸ್ತನು ಅವನಿಗೆ ವಾಗ್ದಾನ ಮಾಡಿದ್ದು ಪರದೈಸು ಅಂದರೆ ವಿಶ್ರಾಂತಿ ಸ್ಥಳ. ಲೂಕ. 24:40–43 ಎರಡನೆಯವನು ಅವನನ್ನು ಗದರಿಸಿ ನೀನು ಇದೇ ದಂಡನೆಯಲ್ಲಿರುವಾಗಲೂ ದೇವರಿಗೆ ಹೆದರುವುದಿಲ್ಲವೋ? ನಾವಂತೂ ನ್ಯಾಯವಾಗಿ ದಂಡನೆಯಲ್ಲಿದ್ದೇವೆ. ನಾವು ಮಾಡಿದ್ದಕ್ಕೆ ತಕ್ಕ ಪ್ರತಿಫಲವನ್ನು ಹೊಂದುತ್ತಾ ಇದ್ದೇವೆ. ಈತನಾದರೂ ಅಲ್ಲದ್ದೇನೂ ಮಾಡಲಿಲ್ಲ ಎಂದು ಹೇಳಿ ಯೇಸುವೇ ನೀನು ನಿನ್ನ ರಾಜ್ಯವನ್ನು ಪಡೆದವನಾಗಿ ಬರುವಾಗ ನನ್ನನ್ನು ನೆನೆಸಿಕೋ ಅಂದನು ಅದಕ್ಕೆ ಯೇಸು ಈ ಹೊತ್ತೇ ನನ್ನ ಸಂಗಡ ಪರದೈಸಿನಲ್ಲಿರುವಿ ಎಂದು ನಿನಗೆ ಸತ್ಯವಾಗಿ ಹೇಳುತ್ತೇನೆ ಎಂದು ಉತ್ತರ ಕೊಟ್ಟನು.

ಮುಂದುವರಿಯುವದು.......

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

## ಆತ್ಮೀಕ ಹೊದಿಕೆ

ನೀವು ಬೇರೆ ಬೇರೆ ಪ್ರಾಂತ್ಯಗಳಲ್ಲಿ ಈಗಾಗಲೇ ಸೇವೆಮಾಡುತ್ತಿದ್ದೀರಿ. ಒಂದು ವೇಳೆ ನೀವು ಸ್ವತಂತ್ರ ಸೇವಕರಾಗಿದ್ದರೆ ಪಾ॥ ಸುನಿಲ್ ಜಾನ್ ಡಿ'ಸೋಜಾರವರ ಮೂಲಕ ಆತ್ಮೀಕ ಹೊದಿಕೆಯನ್ನು ಹೊಂದಬಹುದು.

*ಹೊಂದಲು ಇಚ್ಛಿಸುವವರು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :*

**9844550512, 9902334941, 08202002781**

## ನಮ್ಮೊಂದಿಗೆ ಆಚರಿಸಿ

ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ನಿಮ್ಮ ಮಕ್ಕಳ ಹುಟ್ಟಿದ ದಿನ ಹಾಗೂ ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನವನ್ನು ನಮ್ಮ ಅನಾಥಾಶ್ರಮದ ನಿವಾಸಿಗಳೊಂದಿಗೆ ಆಚರಿಸಲು ಬಯಸುವುದಾದರೆ ನಿಮ್ಮೆಲ್ಲರಿಗೂ ಸ್ವಾಗತ

ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ
**ಮೊಬೈಲ್: 9902334941**

"ದಯಾದೃಷ್ಟಿಯವನು ಆಶೀರ್ವಾದವನ್ನು ಪಡೆಯುವನು;
ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ." ಜ್ಞಾನೋಕ್ತಿ 22:9.

ಆತನ ಸ್ತುತಿಯು ನಿರಂತರವಾದದ್ದು
(ಕೀರ್ತ. 111:10).

# ಆತ್ಮೀಕ ಬೆಳವಣಿಗೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**“ಆದಕಾರಣ ಎಲ್ಲಾ ಕೆಟ್ಟತನವನ್ನು, ಎಲ್ಲಾ ವಂಚನೆಯನ್ನು, ಕಪಟವನ್ನು, ಹೊಟ್ಟೆಕಿಚ್ಚನ್ನು, ಎಲ್ಲಾ ತರದ ನಿಂದೆಯನ್ನು, ವಿಸರ್ಜಿಸಿ ಹಸುಮಕ್ಕಳಂತೆ ಪಾರಮಾರ್ಥಿಕವಾದ ಶುದ್ಧಹಾಲನ್ನು ಬಯಸಿರಿ. ಅದರಿಂದ ಬೆಳೆಯುತ್ತಾ ರಕ್ಷಣೆಯನ್ನು ಹೊಂದುವಿರಿ”** (1 ಪೇತ್ರ. 2:1–2).

ಪ್ರಿಯ ದೇವ ಮಗುವೆ ನಾವು ಕ್ರಿಸ್ತನಲ್ಲಿ ದಿನ ದಿನಕ್ಕೆ ಬೆಳೆಯುತ್ತಾ ಬರಬೇಕೆಂದು ದೇವರು ಬಯಸುತ್ತಾನೆ. ನಾವು ಆತ್ಮೀಕ ಜೀವಿತದಲ್ಲಿ ಇದ್ದ ಸ್ಥಿತಿಯಲ್ಲೇ ಇದ್ದು ದಿನ ದೂಡುವುದು ಅದು ಆಶೀರ್ವಾದಿಸಲ್ಪಡುವ ಜೀವಿತವಲ್ಲ. **“ನಾವು ಇನ್ನು ಮೇಲೆ ಕೂಸುಗಳಾಗಿರಬಾರದು. ಪ್ರೀತಿಯಿಂದ ಸತ್ಯವನ್ನುಸರಿಸುತ್ತಾ ಬೆಳೆದು ಎಲ್ಲಾ ವಿಷಯಗಳಲ್ಲಿಯೂ ಕ್ರಿಸ್ತನ ಸೌಖ್ಯವನ್ನು ಹೊಂದುತ್ತಾ ಬರಬೇಕು”** (ಎಫೆ. 4:15). ಉದಾಹರಣೆಗೆ 1 ಗಿಡವನ್ನು ನೆಟ್ಟು ಅದಕ್ಕೆ ನೀರು ಗೊಬ್ಬರ ಹಾಕಿ ಹಾರೈಕೆ ಮಾಡಿ ಅದು ಮರವಾಗಿ ಹೂವು ಹಣ್ಣುಗಳನ್ನು ಬಿಡಬೇಕೆಂದು ಎದುರುನೋಡುತ್ತೇವೆ ಅಲ್ಲವೆ? ಆದರೆ ಇಷ್ಟೆಲ್ಲಾ ಆರೈಕೆ ಮಾಡಿದ ಮೇಲೆ ಅದು ಬೆಳೆಯದೆ, ಫಲಕೊಡದೆ ಇದ್ದರೆ ನಾವು ಸಂತೋಷ ಹೊಂದಲು ಸಾಧ್ಯವೆ? ಅದೇ ರೀತಿ ದೇವ ಮಗುವೇ, ಕ್ರಿಸ್ತನಲ್ಲಿದ್ದ ನೀನು ಸಹ ದಿನ ದಿನಕ್ಕೆ ಬೆಳೆದು ಫಲ ಕೊಡಬೇಕೆಂದು ದೇವರು ಬಯಸುತ್ತಾನೆ. **“ನೀವು ಬಹಳ ಫಲ ಕೊಡುವದರಿಂದಲೇ ನನ್ನ ತಂದೆಗೆ ಮಹಿಮೆ ಉಂಟಾಗುವುದು ಮತ್ತು ನನ್ನ ಶಿಷ್ಯರಾಗುವಿರಿ”** (ಯೋಹಾ. 15:8). ಕೆಲವರು ಎಷ್ಟೇ ವಾಕ್ಯ ಕೇಳಿದರೂ, ಎಷ್ಟು ಕೂಟಗಳಿಗೆ ಹಾಜಾರಾದರೂ ಯಾವ ಬದಲಾವಣೆ ಅಥವಾ ಬೆಳವಣಿಗೆ ಇಲ್ಲದೆ ಇರುವರು. **“ನೀತಿವಂತರು ಖರ್ಜೂರದ ಮರದಂತೆ ಬೆಳೆಯುವರು”** (ಕೀರ್ತ. 92:12). **“ನೀತಿವಂತರ ಮಾರ್ಗವು ಮಧ್ಯಾಹ್ನದವರೆಗೂ ಹೆಚ್ಚುತ್ತಾ ಬರುವ ಬೆಳಗಿನ ಬೆಳಕಿನಂತಿದೆ”** (ಜ್ಞಾನೋ. 4:18). ಕೆಲವು ಸಂಗತಿಯನ್ನು ನಾವು ಗಮನದಲ್ಲಿಡಬೇಕಾಗಿದೆ. ನಿರ್ಜೀವವಾದ ಯಾವುದೇ ವಸ್ತು, ಸತ್ತದ್ದು, ಒಣಗಿದ್ದು ಎಂದಿಗೂ ಬೆಳೆಯಲು ಸಾಧ್ಯವಿಲ್ಲ. ಪ್ರಿಯರೇ, ನಾವು ಆತ್ಮೀಕವಾಗಿ ಬೆಳೆಯಬೇಕಾದರೆ ಈ ಕೆಳಗೆ ಬರೆದಿರುವ ಕೆಲವು ಸಂಗತಿಗಳನ್ನು ಗಮನದಲ್ಲಿಟ್ಟು ನೆರವೇರಿಸಬೇಕಾಗಿದೆ. ಪ್ರಿಯನೇ, ನೀನು ಆತ್ಮ ವಿಷಯದಲ್ಲಿ ಬೆಳೆದಾಗ ಉಳಿದ ವಿಷಯಗಳಲ್ಲಿಯೂ ಸುಕ್ಷೇಮವಾಗಿರುವಿ.

ವಯಸ್ಕರ ಸ್ವರ

ನಾವು ಆತ್ಮೀಕವಾಗಿ ಬೆಳೆಯಬೇಕಾದರೆ ನಮ್ಮಲ್ಲಿ ಜೀವವಿರಬೇಕು : ಕರ್ತನು ಸಾರ್ಧಿಸಿನಲ್ಲಿರುವ ಸಭೆಗೆ ಬರೆಯುತ್ತಾನೆ, **“ನಿನ್ನ ಕೃತ್ಯಗಳನ್ನು ಬಲ್ಲೆನು; ಜೀವಿಸುವವನು ಎಂದು ಹೆಸರು ನಿನಗಿದ್ದರೂ ಸತ್ತವನಾಗಿದ್ದೀ ಎಂಬುದನ್ನು ಬಲ್ಲೆನು. ಎಚ್ಚರವಾಗಿರು; ಸಾಯುವ ಹಾಗಿದ್ದ ಉಳಿದವುಗಳನ್ನು ದೃಢಪಡಿಸು”** (ಪ್ರಕ. 3:1–2). ಸತ್ತರೆ ಬೆಳೆಯುವುದೆಲ್ಲಿ ಬಂತು ? ಕೆಲವರನ್ನು ನಾವು ನೋಡಿದ್ದೇನೆ. ‘ಹೆಸರಿಗೆ ಬಹಳ ವರ್ಷದಿಂದ ವಿಶ್ವಾಸಿ ಆದರೆ ಒಳಗಿರುವುದು ಪಿಶಾಚಿ’ ನಾವು ಆತ್ಮೀಕವಾಗಿ ಸಾಯಲು ಮುಖ್ಯ ಕಾರಣ ಪಾಪವೇ ಆಗಿದೆ (ಯೆಹೆ. 18:4). ನಾವು ದೇವರಿಗಾಗಿ ಜೀವಿಸಬೇಕಾದರೆ ಪಾಪದ ಪಾಲಿಗೆ ಸತ್ತವರಾಗಿರಬೇಕು (ರೋಮ. 6:11). ಒಬ್ಬರು ಒಂದು ರುಚಿಯಾದ ಹಣ್ಣಿನ ಮರವನ್ನು ನೆಟ್ಟಿದ್ದರು. ಅದಕ್ಕೆ ನೀರು ಗೊಬ್ಬರ ಹಾಕಿ ಅದು ಹೂ ಹಣ್ಣು ಬಿಡುತ್ತದೆ ಎಂದು ಕಾಯುತ್ತಿರುವಾಗ ದಿನ ದಿನ ಆ ಮರ ಒಣಗಿ ಹೋಯಿತು. ಅವರು ಇದು ಹೇಗಾಯಿತು ಎಂದು ಆ ಮರವನ್ನು ಪರೀಕ್ಷಿಸಿದ್ದಾಗ ಅದರ ಬುಡವನ್ನು ಹುಳವು ಕೊರೆದು ದೊಡ್ಡ ತೂತನ್ನು ಮಾಡಿತು. ಆದ್ದರಿಂದ ಆ ಮರ ಒಣಗಿ ಸಾಯಲು ಕಾರಣವಾಯಿತು. ಪ್ರಿಯನೇ, ಆ ಹುಳವೇ ನಮ್ಮ ಜೀವಿತದಲ್ಲಿ ನಮ್ಮನ್ನು ಸಾಯಿಸುವ ಪಾಪವೇ ಆಗಿದೆ. ‘ ಆ ಪಾಪವೆಂಬ ಹುಳವನ್ನು ನೀನು ತಿಳಿದು ಹೊರಕ್ಕೆ ಹಾಕದೆ ಹೋದರೆ ನೀನು ಅಪಾಯದ ಸ್ಥಿತಿಯಲ್ಲಿದ್ದು 1 ದಿನ ಆತ್ಮೀಕ ಜೀವವನ್ನು ಕಳೆದುಕೊಳ್ಳುತ್ತಿ ಎಚ್ಚರಿಕೆ. “ನೀವು ಶರೀರ ಭಾವವನ್ನು ಅನುಸರಿಸಿ ಬದುಕಿದರೆ ಸಾಯುವುದು ನಿಶ್ಚಯ. ನೀವು ಪವಿತ್ರಾತ್ಮನಿಂದ ದೇಹದ ದುರಭ್ಯಾಸಗಳನ್ನು ನಾಶಮಾಡುವುದಾದರೆ ಜೀವಿಸುವಿರಿ (ರೋಮ. 8:13). ಆತ್ಮದಲ್ಲಿ ಸತ್ತವರಿಗೆ ಯಾವ ಆತ್ಮಭಾರ ಸಭೆಯ ಸೇವೆಯ ಕುರಿತಾಗಿ ವೈರಾಗ್ಯ ಯಾವುದು ಇಲ್ಲದೆ ಹೋಗುವುದು “ಸತ್ತ ಸಿಂಹಕ್ಕಿಂತ ಬದುಕಿರುವ ನಾಯಿಯೇ ಲೇಸು. ಜೀವಿತರಿಗೆ ಸಾಯುತ್ತೇವೆಂಬ ತಿಳುವಳಿಕೆಯುಂಟಷ್ಟೆ. ಸತ್ತವರಿಗೋ ಯಾವ ತಿಳುವಳಿಕೆಯೂ ಇಲ್ಲ, ಅವರಿಗೆ ಇನ್ನು ಮೇಲೆ ಪ್ರತಿಫಲವೂ ಇಲ್ಲ (ಪ್ರಸ. 9:5).

ಮುಂದುವರಿಯುವದು......

ಕರ್ತನಲ್ಲಿ ನಿಮ್ಮ ಪ್ರೀತಿಯ

**ಪಾ॥ ರೋನಾಲ್ಡ್ ಮಚಾದೋ**
ಬೇತೇಲ್ ಚರ್ಚ್.

ಅರಣ್ಯವೂ ಮರುಭೂಮಿಯೂ ಆನಂದಿಸುವವು; ಒಣನೆಲವು ಹರ್ಷಿಸಿ ತಾವರೆಯಂತೆ ಕಳಕಳಿಸುವುದು (ಯೆಶಾ. 35:1).

# ವಿಶೇಷ ಸೂಚನೆಗಳು :

**2013 ಮೇ 20-25ರ ವರೆಗೆ 6 ದಿವಸದ ಸ್ಕೂಲ್ ಆಫ್ ವರ್‌ಶಿಪ್ ಡಿಜಿಎಂ ಬೇತೇಲ್ ಚರ್ಚ್ ಯೇಸುಪುರ, ಶಂಕರಪುರದಲ್ಲಿ ನಡೆಸಲ್ಪಡುವುದು. ಇದರಲ್ಲಿ ಭಾಗವಹಿಸಲಿಚ್ಛಿಸುವವರು ಶೀಘ್ರವಾಗಿ ತಮ್ಮ ಹೆಸರುಗಳನ್ನು ನೊಂದಾಯಿಸಬೇಕಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತೇವೆ. ನೊಂದಾವಣೆ ಶುಲ್ಕ 750/- ರೂಪಾಯಿ ಇದನ್ನು ನಡೆಸಿಕೊಡುವವರು ಪಾ॥ ಜಯಶೀಲನ್ ಹಾಗೂ ತಂಡದವರು. (11*24 ದಿವಸ ನಿರಂತರ ಆರಾಧನೆ ಮಾಡಿ ಗಿನ್ನಿಸ್ ದಾಖಲೆಗೊಂಡ ಸೇವಕರು).**

**ಜುಲೈ 2013 18ರಿಂದ 20ರವರೆಗೆ 3 ದಿನದ ಯೌವನಸ್ಥರಿಗಾಗಿ (ಶಕ್ತಿಯ ಕೂಟಗಳು) ಯೂತ್ ಪವರ್ ಕಾನ್ಫರೆನ್ಸ್ ಡಿಜಿಎಮ್ ಬೇತೇಲ್ ಚರ್ಚ್ ಯೇಸುಪುರ, ಶಂಕರಪುರದಲ್ಲಿ ನಡೆಸಲ್ಪಡುವದು ಈ ಕೂಟದಲ್ಲಿ ಯೇಶು ಮೇರಾ ಬಾಹಿ ಸಿ.ಡಿ.ಯ ಹಾಡನ್ನು ಹಾಡಿದ ಪಾ॥ ಅಜಯ್ ಚೋವಾ, ಪಾ॥ ಜಾನ್‌ಸನ್ ವರ್ಗಿಸ್ (ಬೇತೇಲ್ ಎ.ಜಿ. ಚರ್ಚ್ ಬೆಂಗಳೂರು) ಹೆಬಿಕ್ ಸೈಮನ್ (ಕೇರಳ) ಪಾ॥ ನೆಹೆಮೀಯ (ಚನ್ನೈ) ಸಹೋ॥ ಕೃಪಾ (ಚನ್ನೈ) ಈ ಎಲ್ಲಾ ದೇವ ಸೇವಕರುಗಳು ಬಂದು ಸೇವೆಮಾಡಲಿದ್ದಾರೆ. ಈ ಕೂಟದಲ್ಲಿ ಭಾಗವಹಿಸಲಿಚ್ಛಿಸುವವರು ನಿಮ್ಮ ನೊಂದಾವಣೆಯನ್ನು ಶೀಘ್ರವಾಗಿ ಮಾಡಿಕೊಳ್ಳಿ.**

## ಪ್ರಾರ್ಥನಾ ಮನವಿಗಳು

- ದೇವರ ಸ್ವರ ಮಾಸ ಪತ್ರಿಕೆಯ ಸೇವೆಯನ್ನು ಕರ್ತನು ವಿಸ್ತರಿಸುವಂತೆ ಪ್ರಾರ್ಥಿಸಿರಿ.
- ಮಕ್ಕಳು ಪರೀಕ್ಷೆಯಲ್ಲಿ ಉತ್ತಮವಾಗಿ ತೇರ್ಗಡೆ ಹೊಂದುವಂತೆ ಪ್ರತಿ೦ಯೊಂದು ಮಕ್ಕಳು ಶಾಲೆಗೆ ಫಸ್ಟ್ ಬರುವಂತೆ ಪ್ರಾರ್ಥಿಸಿರಿ.
- ನಮ್ಮ ದೇಶದಲ್ಲಿ ಅಧಿಕಾರ ನಡೆಸುತ್ತಿರುವ ಪ್ರತಿಯೊಬ್ಬರು ಉತ್ತಮವಾಗಿ ದೇಶವನ್ನು ಆಳ್ವಿಕೆ ಮಾಡಲು ಕರ್ತನು ಜ್ಞಾನವನ್ನು ಕೊಡುವಂತೆ ಪ್ರಾರ್ಥಿಸಿರಿ.
- ಎಲ್ಲಾ ಸೇವೆಯನ್ನು, ಸೇವಕರನ್ನು, ಸಭೆಯ ವಿಶ್ವಾಸಿಗಳನ್ನು ಕರ್ತನು ಕೊನೆಯವರೆಗೂ ಕಾಯ್ದುಕಾಪಾಡುವಂತೆ ಪ್ರಾರ್ಥಿಸಿರಿ.
- ಎಲ್ಲಾ ದೇವರ ಮಕ್ಕಳು ರಕ್ಷಣೆಯಲ್ಲಿ ಕೊನೆವರೆಗೂ ಸ್ಥಿರವಾಗಿ ದೃಢವಾಗಿ ನಿಲ್ಲಲು ಕರ್ತನು ಸಹಾಯಮಾಡುವಂತೆ ಪ್ರಾರ್ಥಿಸಿರಿ.
- ನಮ್ಮ ದೇಶದಲ್ಲಿ ಯಾವುದೇ ನೀರಿನ ಕೊರತೆ, ವಿದ್ಯುತ್ ಕೊರತೆ, ಬರಗಾಲಗಳು, ಬಡತನಗಳು ಇಲ್ಲದ ಸಮೃದ್ಧಿಯುಳ್ಳ ದೇಶವಾಗಿ ಮಾರ್ಪಡುವಂತೆ ಪ್ರಾರ್ಥಿಸಿರಿ.

ಬತ್ತಿದ ಭೂಮಿಯಲ್ಲಿ ಮಳೆಗರೆದು ಒಣ ನೆಲದಲ್ಲಿ ಕಾಲುವೆ ಹರಿಸುವೆನು
(ಯೆಶಾ. 44:3).

## ಯು.ಬಿ.ಯಂ. ಜುಬಿಲಿ ದೇವಾಲಯದ ಮಹಿಳಾ ಅನ್ಯೋನ್ಯಕೂಟ ಉಡುಪಿ

### ಇದರ ವತಿಯಿಂದ ನಡೆಯುವ ರಾಜ್ಯಮಟ್ಟದ ಅಂತರ್ ಸಭೆಗಳ

# ಬೈಬಲ್ ಕ್ವಿಝ್ 2013

ಯು.ಬಿ.ಯಂ. ಜುಬಿಲಿ ದೇವಾಲಯದ ಉಡುಪಿ ಇದರ ಮಹಿಳಾ ಅನ್ಯೋನ್ಯ ಕೂಟದ ವತಿಯಿಂದ 2010 ಮತ್ತು 2011ರಲ್ಲಿ ಜಿಲ್ಲಾ ಮಟ್ಟದ ಅಂತರ್ ಸಭೆಗಳ ಬೈಬಲ್ ಕ್ವಿಝ್‌ನ್ನು ಆಯೋಜಿಸಲಾಗಿತ್ತು. 2012ರಲ್ಲಿ ರಾಜ್ಯಮಟ್ಟದ ಬೈಬಲ್ ಕ್ವಿಝ್‌ನ್ನು ಆಯೋಜಿಸಲಾಗಿತ್ತು. ಈ ವರ್ಷ ಮಹಿಳಾ ಅನ್ಯೋನ್ಯ ಕೂಟದವರು ಜೂನ್ ತಿಂಗಳ 23ರಂದು ರಾಜ್ಯದ 5 ಕಡೆಗಳಲ್ಲಿ ನಿರ್ಣಾಯಕ ಹಂತ (Elimination Round) ವನ್ನೂ ಜುಲೈ ತಿಂಗಳ 7ನೇ ತಾರೀಕಿನಂದು ಮುಖ್ಯ ಹಂತವನ್ನೂ ನಡಿಸಿ ಬೈಬಲ್ ಕ್ವಿಝ್ ಕಾರ್ಯಕ್ರಮವನ್ನು ನೆರವೇರಿಸುವುದೆಂದು ನಿರ್ಧರಿಸಿರುತ್ತಾರೆ.

***ಈ ಕ್ವಿಝ್ ಕಾರ್ಯಕ್ರಮಕ್ಕೆ ಓದಿಕೊಳ್ಳಬೇಕಾದ ಪುಸ್ತಕಗಳು :***

**ಹಳೆ ಒಡಂಬಡಿಕೆಯಲ್ಲಿ : 1. ವಿಮೋಚನಾ ಕಾಂಡ. 2. ಎಸ್ತೇರಳು.**
**ಹೊಸ ಒಡಂಬಡಿಕೆಯಲ್ಲಿ : ಪ್ರಕಟಣೆ**

**ಮೊದಲ ಬಹುಮಾನ : ರೂ. 11,111/– ಮತ್ತು ರೋಲಿಂಗ್ ಶೀಲ್ಡ್**
**ದ್ವಿತೀಯ ಬಹುಮಾನ : ರೂ. 7,777/–**
**ತೃತೀಯ ಬಹುಮಾನ : ರೂ. 5,555/–**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 9743288166**
**www.facebook.com/ubmjc**

---

## ವಿಶ್ವಾಸದ ಮನೆ ಅನಾಥಾಶ್ರಮದ ಸೇವೆಯಲ್ಲಿ ನೀವು ಪಾಲುದಾರರಾಗಲು ಬಯಸುವಿರಾ

1. ಪ್ರಾರ್ಥನೆಯ ಮೂಲಕ ಸಹಾಯ ಮಾಡಬಹುದು.
2. ಆರ್ಥಿಕವಾಗಿ ಸಹಾಯ ನೀಡಬಹುದು
3. ವಸ್ತುಗಳ ರೂಪದಲ್ಲಿ ಸಹಾಯ ನೀಡಬಹುದು.

**ಆರ್ಥಿಕ ಸಹಾಯ ನೀಡಲಿಚ್ಛಿಸುವವರು :**

| | |
|---|---|
| ತಿಂಗಳಿಗೊಮ್ಮೆ | ರೂ. 500/– |
| ಮೂರು ತಿಂಗಳಿಗೊಮ್ಮೆ | ರೂ. 2000/– |
| ಆರು ತಿಂಗಳಿಗೊಮ್ಮೆ | ರೂ. 6000/– |
| ವರ್ಷಕ್ಕೊಮ್ಮೆ | ರೂ. 8000/– |

ದಯವಿಟ್ಟು ನಮ್ಮನ್ನು ಸಂಪರ್ಕಿಸಿರಿ ಹಾಗೂ ಅನಾಥರ ಸೇವೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿರಿ.
**ಮೊಬೈಲ್ : 9902334941**

ದೇವರೇ, ನಿನ್ನ ನಾಮದ ಘನತೆಗೆ ತಕ್ಕಂತೆಯೇ ಲೋಕವೆಲ್ಲಾ ನಿನ್ನನ್ನು ಹೊಗಳುವದು
(ಕೀರ್ತ. 48:10).

ಆರೋಗ್ಯ ಸ್ವರ

# ಚಳಿಗಾಲದ ಆಹಾರ ಹೀಗಿರಲಿ

ಚಳಿಗಾಲದಲ್ಲಿ ಆರೋಗ್ಯ ಕಾಪಾಡಿಕೊಳ್ಳಲು ಅಗತ್ಯವಾದ ಆಹಾರದ ಬಗ್ಗೆ ಪೌಷ್ಟಿಕಾಂಶ ತಜ್ಞೆ, ದಿ ವೈಟ್ ಮಾನಿಟರ್ ಡಾಟ್‌ಕಾಂ, ಹೋಲ್‌ಫುಡ್ಸ್ ಇಂಡಿಯಾ ಹಾಗೂ ಸೆಲಿಯಾಕ್ ಸೊಸೈಟಿ ಫಾರ್ ದಿಲ್ಲಿಯ ಸಂಸ್ಥಾಪನಾ ಅಧ್ಯಕ್ಷೆ ಇಶಿ ಖೋಸ್ಲಾ ಇಲ್ಲಿ ಮಾಹಿತಿ ನೀಡಿದ್ದಾರೆ.

ಚಳಿಗಾಲದಲ್ಲಿ ಕುಟುಂಬದ ಸದಸ್ಯರು, ಸ್ನೇಹಿತರೊಡನೆ ಚಹಾ ಮತ್ತು ಪಕೋಡಾ ಸೇವಿಸುವುದು ಅಥವಾ ಸಾಯಂಕಾಲದ ತಂಗಾಳಿಯಲ್ಲಿ ಸುದೀರ್ಘ ನಡಿಗೆ ಹೊರಡುವುದು ಹಿತಕರವಾಗಿರುತ್ತದೆ. ಚಳಿಗಾಲದಲ್ಲಿ ವಿವಾಹಗಳೂ ಹೆಚ್ಚಾಗಿ ನಡೆಯುತ್ತವೆ. ಹಬ್ಬ, ಉತ್ಸವಾದಿಗಳಲ್ಲಿ ಹೆಚ್ಚಾಗಿ ಭಾಗವಹಿಸುತ್ತೇವೆ. ಬಾಯಲ್ಲಿ ನೀರೂರಿಸುವ ಸಿಹಿ ಭಕ್ಷ್ಯಗಳು, ನಾನಾ ತಿಂಡಿಗಳು ಆಕರ್ಷಿಸುತ್ತವೆ. ಹೀಗಿದ್ದರೂ ನಮ್ಮ ಊಟೋಪಚಾರದಲ್ಲಿ ಕೆಲ ಬದಲಾವಣೆಗಳನ್ನು ಮಾಡಿಕೊಂಡು ಎಚ್ಚರಿಕೆಯಿಂದ ಆಹಾರ ಸೇವಿಸುವುದು ಒಳ್ಳೆಯದು. ಇದರಿಂದ ಚಳಿಗಾಲದಲ್ಲಿ ಆರೋಗ್ಯ ಕಾಪಾಡಿಕೊಳ್ಳಬಹುದು.

ಆಹಾರಾಭ್ಯಾಸದಲ್ಲಿ ಬದಲಾವಣೆ : ಪರಿಸರದ ತಾಪಮಾನ ಇಳಿಕೆಯಾಗುತ್ತಿದ್ದಂತೆ ನಮ್ಮ ಶರೀರದ ತಾಪಮಾನವೂ ಇಳಿಯುತ್ತದೆ. ಇದರ ಪರಿಣಾಮವನ್ನು ಎದುರಿಸಲು ಶರೀರವು ಚಯಾಪಚಯ ಕ್ರಿಯೆಯನ್ನು ಏರಿಸಿಕೊಳ್ಳುವ ಮೂಲಕ ಉಷ್ಣವನ್ನು ಉತ್ಪಾದಿಸಿಕೊಳ್ಳುತ್ತದೆ. ಆಹಾರದಲ್ಲಿನ ಕೊಬ್ಬಿನ ಅಂಶವನ್ನು ಕರಗಿಸುವ ಮೂಲಕ ಚಯಾಪಚಯ ಕ್ರಿಯೆ ಹೆಚ್ಚುತ್ತದೆ. ಇದರಿಂದ ಹೆಚ್ಚು ಆಹಾರಬೇಕೆಂಬ ಭಾವನೆ ನಮಗೆ ಉಂಟಾಗುತ್ತದೆ.

ಆರೋಗ್ಯಕರ ಮೆದುಳಿಗೆ ಆಹಾರ ಚಳಿಗಾಲದಲ್ಲಿ ನಿತ್ಯ ಪೌಷ್ಟಿಕಾಂಶಯುಕ್ತ ಆಹಾರ, ವಿಟಮಿನ್, ಖನಿಜಾಂಶ ಒಳಗೊಂಡಿರುವ ಆಹಾರ ಸೇವಿಸಬೇಕು. ಇದರಿಂದ ಶರೀರ ಬೆಚ್ಚಗಿರುತ್ತದೆ. ಮೆದುಳನ್ನು ಚುರುಕಾಗಿಸುತ್ತದೆ. ಚರ್ಮದ ಆರೋಗ್ಯ ಕಾಪಾಡುತ್ತದೆ.

ನಿತ್ಯದ ಆಹಾರಾಭ್ಯಾಸ ಇಂತಿರಲಿ: ಬಾದಾಮಿ : ನಿಯಮಿತವಾಗಿ ಬಾದಾಮಿ ಸೇವನೆಯಿಂದ ಅಗತ್ಯ ಚೈತನ್ಯ, ದೈಹಿಕ ಶಕ್ತಿ, ಮಾನಸಿಕ ಚೈತನ್ಯ ಪಡೆಯಬಹುದು. ಲವಲವಿಕೆಯಿಂದ ಇರಬಹುದು. ಬಾದಾಮಿಯು ಮೆದುಳು ಮತ್ತು ಹೃದಯದ ಆರೋಗ್ಯಕ್ಕೆ ಒಳ್ಳೆಯದು. ಬಾದಾಮಿಯಲ್ಲಿ ಅಗತ್ಯವಾದ ಎಲ್ಲ ಪೌಷ್ಟಿಕಾಂಶಗಳೂ ಮಿಳಿತವಾಗಿರುತ್ತವೆ. ಇದು ಆರೋಗ್ಯಕರ ಜೀವನಕ್ಕೆ ನೆರವಾಗುತ್ತದೆ. ಬಾದಾಮಿ ಕೊಲೆಸ್ಟ್ರಾಲ್ ಅಂಶವನ್ನು ಕಡಿಮೆ ಮಾಡಲು ಸಹಕರಿಸುತ್ತದೆ. ಹೃದಯದ ಕಾಯಿಲೆಯನ್ನು ದೂರ ಮಾಡಲು ಸಹಕರಿಸುತ್ತದೆ.

ಕೇವಲ ಒಂದು ಔನ್ಸ್‌ನಷ್ಟು ಬಾದಾಮಿ 13 ಗ್ರಾಂನಷ್ಟು ಸಾಂದ್ರವಲ್ಲದ ಕೊಬ್ಬಿನಂಶ ಹೊಂದಿರುತ್ತದೆ. ಕೇವಲ ಒಂದು ಗ್ರಾಂ ಸಾಂದ್ರತೆಯ ಕೊಬ್ಬು ಅದರಲ್ಲಿ ಇರುತ್ತದೆ. ಈ ಮೂಲಕ, ಕೊಲೆಸ್ಟ್ರಾಲ್ ಅನ್ನು ದೂರ ಇರಿಸುತ್ತದೆ. ಆದ್ದರಿಂದ ದಿನವನ್ನು ಬಾದಾಮಿಯೊಂದಿಗೆ ಪ್ರಾರಂಭಿಸಿ.

ಮೀನು : ಮೀನನ್ನು ತಿನ್ನುವುದರಿಂದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಬಹುದು. ಅಗತ್ಯವಾದ ಪೌಷ್ಟಿಕಾಂಶವೂ ಲಭಿಸುತ್ತದೆ. ಇದರಲ್ಲಿ ಉತ್ತಮ ಡಿಎಚ್‌ಎ (ಫ್ಯಾಟಿ ಆಸಿಡ್) ಇರುತ್ತದೆ. ಇದು ನರವ್ಯೂಹವನ್ನು ಬಲಪಡಿಸುತ್ತದೆ. ಅಗತ್ಯವಾದ ಹಲವು ಪೌಷ್ಟಿಕಾಂಶಗಳು ಲಭಿಸುತ್ತವೆ.

ಹಸಿರೆಲೆಗಳು : ಕ್ಯಾಬೇಜ್, ಹೂಕೋಸು, ಹರಿವೆ ಸೊಪ್ಪು ಮುಂತಾದ ಹಸಿರೆಲೆ, ತರಕಾರಿಗಳಿಂದ ವಿಟಮಿನ್ ಎ.ಸಿ.ಕೆ.ಇ ಮುಂತಾದವು ಲಭಿಸುತ್ತವೆ. ವಿಟಮಿನ್ ಎ, ಸಿ ಮತ್ತು ಇ ಮೆದುಳಿನ ಶಕ್ತಿಯನ್ನು ಹೆಚ್ಚಿಸುತ್ತವೆ. ತರಕಾರಿಗಳು ಬಿ 6 ಮತ್ತು ಇತರ ಪೌಷ್ಟಿಕಾಂಶಗಳನ್ನು ಒಳಗೊಂಡಿರುತ್ತವೆ.

ಕಾರ್ಬೋಹೈಡ್ರೇಟ್ ಯುಕ್ತ ಆಹಾರ : ನಮಗೆ ಉತ್ತಮ ಕಾರ್ಬೋಹೈಡ್ರೇಟ್ ಯುಕ್ತ ಆಹಾರ ಅಗತ್ಯ. ಸಿರೋಟೋನಿನ್ ಉತ್ಪಾದಿಸುವ ಇದು ಮೆದುಳಿನ ಆರೋಗ್ಯಕ್ಕೆ ಉತ್ತಮ. ಅಲ್ಲದೆ ಸುಖ ನಿದ್ರೆಗೆ ನೆರವಾಗುತ್ತದೆ. ಧಾನ್ಯ, ಬಾರ್ಲಿ, ದವಸ ಧಾನ್ಯಗಳು, ಆಲೂಗಡ್ಡೆ ಇತ್ಯಾದಿಗಳಲ್ಲಿ ಉತ್ತಮ ಕಾರ್ಬೋಹೈಡ್ರೇಟ್ ಅಂಶ ಇರುತ್ತದೆ.

### ಹುಡುಗರ ತಲೆಗೂದಲೂ ನೆರೆಯುತ್ತದೆ !

ಹಿಂದಿನ ಕಾಲದಲ್ಲಿ 40ರ ಪ್ರಾಯದಲ್ಲಿ ಕೂದಲು ನೆರೆಯುತ್ತಿತ್ತು. ಇಂದು 20ರಿಂದ 30 ವರ್ಷಗಳಲ್ಲೇ ಕೂದಲು ನೆರೆಯುವುದು ಹೆಚ್ಚಾಗಿ ಕಂಡುಬರುತ್ತದೆ. ಕೂದಲು ನೆರೆದಿರುವ ಪುರುಷರು ಕೂದಲನ್ನು ಸಣ್ಣಗೆ ಇರುವಂತೆ ಹೇರ್‌ಸ್ಟೈಲ್ ಬಳಸಿದರೆ ಡೈ ಮಾಡಲು ಸುಲಭ.

ಯಾವಾಗಲೂ ಮುಖಕ್ಕೆ ಒಪ್ಪುವ ಹೇರ್‌ಸ್ಟೈಲ್ ಬಳಸುವುದು ವ್ಯಕ್ತಿತ್ವಕ್ಕೆ ಶೋಭೆ ನೀಡುತ್ತದೆ. ಆದ್ದರಿಂದ ಹೇರ್‌ಸ್ಟೈಲನ್ ಆಯ್ಕೆ ಮುಖದ ಆಕಾರಕ್ಕೆ ತಕ್ಕಂತಿರಬೇಕಾಗುತ್ತದೆ.

ಹೇರ್‌ಡೈಯನ್ನು ಹೀಗೆ ತಯಾರಿಸಿ ಲೇಪಿಸಬಹುದು. ಮದರಂಗಿ ಅಥವಾ ಗೋರಂಟಿ ಹುಡಿ, ನೆಲ್ಲಿಕಾಯಿ ಹುಡಿ ಹಾಗೂ ಮೊಟ್ಟೆಯ ಬಿಳಿಭಾಗ, ಚಹಾದ ಡಿಕಾಕ್ಷನ್ ಇವೆಲ್ಲವನ್ನು ಚೆನ್ನಾಗಿ ಮಿಶ್ರಮಾಡಿ ಒಂದು ಶುಭ್ರವಾದ ಕಬ್ಬಿಣದ ಪಾತ್ರೆಯಲ್ಲಿ ಕಲಸಿಡಬೇಕು. ರಾತ್ರಿ ಹಾಕಿಟ್ಟು ಮರುದಿನ ಬ್ರಶ್‌ನಿಂದ ಕೂದಲಿಗೆ ಲೇಪಿಸಿ 2–3 ಗಂಟೆ ಬಳಿಕ ಸ್ನಾನ ಮಾಡಿದರೆ ನೆರೆಗೂದಲು ಮರೆಮಾಚುವ ಉತ್ತಮ ಹೇರ್‌ಡೈ ಇದು.

ಪುರುಷರನ್ನು ಹೆಚ್ಚು ಕಾಡುವ ಕೂದಲು ಉದುರುವಿಕೆ ಸಮಸ್ಯೆಗೆ ಬಯೋಟಿನ್ ಹೆಚ್ಚಿರುವ ಆಹಾರ ಸೇವನೆ ಹಿತಕರ. ಕಿತ್ತಳೆ, ನೆಲ್ಲಿ, ಸೀಬೆ, ಮೊಸಂಬಿ, ನಿಂಬೆ ಮುಂತಾದ ವಿಟಮಿನ್ ಸಿ ಅಧಿಕವಿರುವ ಹಣ್ಣುಗಳ ಸೇವನೆ ಫಲಕಾರಿ. ಓಟ್ಸ್, ಕುಸುಬುಲಕ್ಕಿ ಹಸಿರು ಸೊಪ್ಪು ತರಕಾರಿಗಳು, ಮೊಳಕೆ ಬರಿಸಿದ ಧಾನ್ಯ, ಹಾಲು ಮೊಸರು ಉಪಯುಕ್ತ.

1/2 ಕಪ್ ಎಳನೀರಿಗೆ 1/2 ನಿಂಬೆರಸ ಹಿಂಡಿ ಕೂದಲಿಗೆ ಲೇಪಿಸಬೇಕು. ಬಳಿಕ ಬೆರಳ ತುದಿಯಿಂದ ಮಾಲೀಶು ಮಾಡಿದರೆ ರಕ್ತ ಸಂಚಾರ ವರ್ಧಿಸಿ, ಪೋಷಕಾಂಶಗಳು ದೊರೆತು ಕೂದಲು ಉದುರುವಿಕೆ ನಿಲ್ಲುತ್ತವೆ.

– ಸಂಗ್ರಹ.

ನೀತಿವಂತರೇ, ಯೆಹೋವನಲ್ಲಿ ಸಂತೋಷಿಸುತ್ತಾ ಉಲ್ಲಾಸವಾಗಿರ್ರಿ

(ಕೀರ್ತ. 32:11).

# ಪ್ರಶ್ನೋತ್ತರಗಳ ಸ್ವರ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ರಸ್ತೆಬದಿಯಲ್ಲಿ ತಿರುಗಾಡುತ್ತಿರುವಂತಹ ಮಾನಸಿಕ ಅಸ್ವಸ್ಥ ಸ್ತ್ರೀಯರಿಗಾಗಿ ನಮನ ವಿಶ್ವಾಸದಮನೆ ಮಾನಸಿಕ ಅಸ್ವಸ್ಥರ ಪುನರ್‌ವಸತಿ ಕೇಂದ್ರವನ್ನು ಸ್ಥಾಪಿಸಲು ಕರ್ತನು ಸಹಾಯಮಾಡಿದನು. ಇದರಲ್ಲಿ ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಒರಿಸ್ಸಾ, ಬಿಹಾರ್, ಗುಜರಾತ್, ರಾಜಸ್ಥಾನ್, ದೆಲ್ಲಿ, ಕಲ್ಕತ್ತಾ, ತಮಿಳುನಾಡು, ಆಂಧ್ರಪ್ರದೇಶ, ಕೇರಳ, ಮಹಾರಾಷ್ಟ್ರ, ಗೋವಾ, ಕರ್ನಾಟಕದ ನಾನಾ ಜಿಲ್ಲೆಗಳಿಂದ ಹೀಗೆ ಅನೇಕ ಭಾಷೆ ಮಾತನಾಡುವ ಜನರು ನಮ್ಮ ಪುನರ್‌ವಸತಿ ಕೇಂದ್ರದಲ್ಲಿದ್ದಾರೆ. ಅವರು ರಸ್ತೆ ಬದಿಯಲ್ಲಿ ಕಸದ ತೊಟ್ಟಿಯಿಂದ ಹೆಕ್ಕಿ ತಿಂದು ಕೊಳಕು ನೀರನ್ನು ಕುಡಿದು ತಿಂಗಳುಗಟ್ಟಲೇ ಸ್ನಾನ ಮಾಡದೆ ಮೈಯೆಲ್ಲ ಕಜ್ಜಿಯಿಂದ ತುಂಬಲ್ಪಟ್ಟು ತಲೆಗೂದಲು ಜಡೆಗಟ್ಟಿ ಅಸಹ್ಯವಾದ ದುರ್ವಾಸನೆಯಿಂದ ತುಂಬಲ್ಪಟ್ಟು ಜನರಿಂದ ತಿರಸ್ಕರಿಸಲ್ಪಟ್ಟು ರಸ್ತೆಯ ಬದಿಯಲ್ಲಿ ಅಲೆದಾಡುವಂತಹ ಈ ವ್ಯಕ್ತಿಗಳನ್ನು ವಿಶ್ವಾಸದಮನೆ ಪುನರವಸತಿ ಕೇಂದ್ರಕ್ಕೆ ಕರೆದುಕೊಂಡು ಬಂದು ಅವರನ್ನು ಶುಚಿಗೊಳಿಸಿ ತಲೆಕೂದಲನ್ನು ಕತ್ತರಿಸಿ ಗಡ್ಡ ತೆಗೆದು ಒಳ್ಳೆ ಬಟ್ಟೆಯನ್ನು ತೊಡಿಸಿ ಸಮಾಜದಲ್ಲಿ ಒಳ್ಳೆ ನಾಗರೀಕರಾಗಿ ಜೀವಿಸುವುದಕ್ಕೆ ಸಮಾಜದ ಮುಂದುಗಡೆಗೆ ತರುವುದಕ್ಕೆ ದೇವರ ರಾಜ್ಯದ ಕಟ್ಟೋಣಕ್ಕಾಗಿ ಆತ್ಮಗಳ ರಕ್ಷಣೆಗಾಗಿ ಜಜ್ಜಿಹೋದ ಈ ಜನಗಳ ಬಿಡುಗಡೆಗಾಗಿ ಕರ್ತನು ಈ ಒಂದು ಸೇವೆಯನ್ನು ಕೊಟ್ಟಿರುತ್ತಾನೆ. ರಸ್ತೆಯಿಂದ ಕರೆದುಕೊಂಡು ಬಂದ 2, 3 ತಿಂಗಳಲ್ಲಿ ಇವರು ಸಾಮಾನ್ಯ ಮನುಷ್ಯರಾಗಿ ಜೀವಿಸಲು ಪ್ರಾರಂಭಿಸುತ್ತಾರೆ. ಇವರಲ್ಲಿ ಬಿ.ಎ. ಬಿ.ಕಾಂ. ಕಲೆಗಾರ, ಇಂಜಿನಿಯರಿಂಗ್, ಕಾಲೇಜು ಓದಿದವರು ಕೂಡ ಇದ್ದಾರೆ. ಇವರ ಆರೋಗ್ಯ ಸುಧಾರಿಸಿಕೊಂಡು ನೆನಪಿನ ಶಕ್ತಿ ಬಂದ ನಂತರ ಇವರಿಗೆ ನಮ್ಮ ಸಂಸ್ಥೆಯಿಂದ ಕೆಲವು ಕೆಲಸಗಳನ್ನು ಕಲಿಸಿಕೊಡಲಾಗುತ್ತದೆ. ವೆಲ್ಡಿಂಗ್ ವರ್ಕ್ಸ್ ಶಾಪ್, ಕಟ್ಟಡ ಕೆಲಸಗಳು, ತೋಟಗಾರಿಕೆ, ಹೈನುಗಾರಿಕೆ, ಟೈಲರಿಂಗ್, ಮೇಣದ ಬತ್ತಿ, ಮೇಸ್ತ್ರೀ ಕೆಲಸ, ಗಾರೆ ಕೆಲಸ, ಕಲ್ಲು ಕೆತ್ತುವಂತಹ ಕೆಲಸ, ಚಿತ್ರಗಳನ್ನು ಬಿಡಿಸುವಂತದ್ದು, ಹಿಡಿಸುಡಿ ಮಾಡುವಂತದ್ದು ಹೀಗೆ ಅನೇಕ ಕೆಲಸಗಳನ್ನು ಕಲಿಸಿಕೊಡಲಾಗುತ್ತದೆ ಹಾಗೂ ನಮ್ಮ ಸಂಸ್ಥೆಯಲ್ಲಿರುವ ಎಂ.ಎಸ್.ಡಬ್ಲ್ಯುರವರ ಮೂಲಕ ಕೌನ್ಸಲಿಂಗ್ ಕೊಡಲಾಗುತ್ತದೆ. ಅವರ ವಿಳಾಸವನ್ನು ಪತ್ತೆ ಅಚ್ಚುವ ಕೆಲಸವನ್ನು ಮಾಡಲಾಗುತ್ತದೆ. ನಮ್ಮ ಸ್ವಂತ ವಾಹನದಲ್ಲಿ ಅವರ ವಿಳಾಸಗಳನ್ನು ಹುಡುಕಿ ಅವರ ಕುಟುಂಬಗಳಿಗೆ ತಲುಪಿಸುವ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಅವರು ನಮ್ಮ ಸೇವೆಯ ಮೂಲಕವಾಗಿ ಆತ್ಮ ರಕ್ಷಣೆ ಮಾತ್ರವಲ್ಲದೆ ಕ್ರಿಸ್ತನ ನಿಜವಾದ ಪ್ರೀತಿಯನ್ನು ಕಾಣುತ್ತಾರೆ. ಈವರೆಗೆ 119 ಮಂದಿಯನ್ನು ಅವರ ಮನೆಗಳಿಗೆ ತಲುಪಿಸಿದ್ದೇವೆ. ಕೆಲವರು 5 ವರ್ಷ, 8 ವರ್ಷ, 10 ವರ್ಷ, 12 ವರ್ಷ, 15 ವರ್ಷ, 22 ವರ್ಷ, 27 ವರ್ಷಗಳ ನಂತರ ತನ್ನ ಕುಟುಂಬಗಳನ್ನು ಸೇರುತ್ತಾರೆ. ಅವರ ಕುಟುಂಬಗಳಿಗೂ, ಊರಿನ ಜನರಿಗೂ ಒಂದು ರೀತಿಯ ಆಶ್ಚರ್ಯವಾಗಿರುತ್ತದೆ. ಇವರು ಸತ್ತದ್ದರೆಂದು ಅವರು ಯೋಚನೆ ಮಾಡಿರುತ್ತಾರೆ. ಇದೇ ರೀತಿಯಾಗಿ ಅನಾಥರಿಗಾಗಿ, ನಿರ್ಗತಿಕರಾಗಿ, ನಿರಾಶ್ರಿತರಿಗಾಗಿ ವಿಶ್ವಾಸದಮನೆ ಅನಾಥಾಶ್ರಮವನ್ನು ಸ್ಥಾಪಿಸಲು ಕರ್ತನು ಸಹಾಯಮಾಡಿದ್ದಾನೆ. ವಿಶ್ವಾಸದಮನೆ ಅನಾಥಾಶ್ರಮದಲ್ಲಿ ದೇಶದ ನಾನಾ ಭಾಗಗಳಿಂದ ರಸ್ತೆ ಬದಿಗಳಲ್ಲಿ ಅನಾಥರಾಗಿ ತಿರುಗಾಡುತ್ತಿರುವಂತಹ ಅನಾಥರನ್ನು ಕರೆದುಕೊಂಡು ಬಂದು ಸೇವೆ ಮಾಡುವಂತೆ ಕರ್ತನು ಕೃಪೆ ತೋರಿಸಿದ್ದಾನೆ. ಕತ್ತಲೆ ತುಂಬಿದ ಇವರ ಜೀವಿತದಲ್ಲಿ ನಿರೀಕ್ಷೆಯ ಹೊಸ ಬೆಳಕನ್ನು ತುಂಬಿಸಲು ನಮ್ಮ ಸೇವೆಯ ಮೂಲಕ ಸಾಧ್ಯವಾಗಿದೆ. ಅದೇ ರೀತಿಯಲ್ಲಿ ಭಿಕ್ಷೆ ಬೇಡುವಂತಹ ಅನಾಥರು, ಬಡವರು, ಹಿಂದುಳಿದವರು ಆಗಿರುವಂತಹ ಮಕ್ಕಳಿಗಾಗಿ ಸ್ಫೂರ್ತಿ ವಿಶ್ವಾಸದಮನೆ ವಸತಿ ನಿಲಯವನ್ನು ಆರಂಭಿಸುವಂತೆ ಕರ್ತನು ಕೃಪೆತೋರಿಸಿದ್ದಾನೆ. ಅವರಿಗೆ ವಿಧ್ಯಾಭ್ಯಾಸ ಕೊಡುವುದು ಮಾತ್ರವಲ್ಲದೆ ವಸ್ತ್ರ, ವಸತಿ, ಊಟ ಉಪಚಾರ ಮಾತ್ರವಲ್ಲದೆ ಕರ್ತನನ್ನು ತಿಳಿದುಕೊಂಡು ಕರ್ತನ ಮಾರ್ಗದಲ್ಲಿ ನಡೆಯಲು ಕರ್ತನು ಕೃಪೆತೋರಿಸಿದ್ದಾನೆ. ಅದರ ನಂತರ ವಿಶ್ವಾಸದಮನೆ ಕರುಣಾಲಯ ಅನಾಥ ವೃದ್ಧರಿಗಾಗಿ ವೃದ್ಧಾಶ್ರಮವನ್ನು ಸ್ಥಾಪಿಸುವಂತೆ ಕರ್ತನು ಕೃಪೆ ತೋರಿಸಿದ್ದಾನೆ. ಮನೆಯಿಂದ ಹೊರ ಹಾಕಲ್ಪಟ್ಟು ಮಕ್ಕಳಿಂದ ತೀರಸ್ಕರಿಸಲ್ಪಟ್ಟು ಬೀದಿ ಬದಿಗಳಲ್ಲಿ ಅನಾಥರಾಗಿ ಅಲೆಮಾರಿಗಳಾಗಿ ಜೀವಿಸುವಂತಹ ಈ ಮುದಿ ಜೀವಿಗಳು ವಿಶ್ವಾಸದಮನೆ ಕರುಣಾಲಯ ವೃದ್ಧಾಶ್ರಮದಲ್ಲಿ ಕೇವಲ ವಸತಿಯನ್ನು ಮಾತ್ರವಲ್ಲದೆ, ಪ್ರೀತಿ, ನೀರಿಕ್ಷೆ, ಹೊಸ ಬೆಳಕನ್ನು ಸಂತೋಷ, ಸಮಾಧಾನಪಡೆದುಕೊಂಡು ಜೀವಿಸುತ್ತಿದ್ದಾರೆ ಹಾಗೂ ಶರೀರದ ಅವಯುವಗಳನ್ನು ಕಳಕೊಂಡು ಅಂಗವಿಕಲರಾಗಿ ಬೀದಿ ಬದಿಗಳಲ್ಲಿ ಭಿಕ್ಷೆ ಬೇಡುವಂತಹ

ಇಸ್ರಾಯೇಲ್ಯರಿಗೆ ಶುಭವಾಗಬೇಕೆಂಬದೇ ಯೆಹೋವನ ಚಿತ್ತ
(ಅರಣ್ಯ. 24:1).

ಅನಾಥ ಅಂಗವಿಕಲರಿಗಾಗಿ ವಿಶ್ವಾಸದಮನೆ ಆಶ್ರಯ ಆಶ್ರಮವನ್ನು ಸ್ಥಾಪಿಸುವಂತೆ ಕರ್ತನು ಕೃಪೆ ಮಾಡಿದನು. ಹೀಗೆ ದು:ಖ ನೋವು, ರೋಗ, ವೇದನೆ, ತಿರಸ್ಕಾರ, ಅವಮಾನ, ಬಡತನ, ನಿರಾಶ್ರಯ ಇವುಗಳಿಂದ ಜಜ್ಜಲ್ಪಟ್ಟ ಜೀವಿಗಳು ಇವತ್ತು ನಿರೀಕ್ಷೆಯೊಂದಿಗೆ, ಬಿಡುಗಡೆಯೊಂದಿಗೆ, ರಕ್ಷಣೆಯೊಂದಿಗೆ, ನಿತ್ಯಜೀವದ ನಿರೀಕ್ಷೆಯೊಂದಿಗೆ ನಮ್ಮ ಸೇವೆ ಮೂಲಕವಾಗಿ ಹೊಸ ಜೀವಪಡೆದು ಜೀವಿಸುತ್ತಿದ್ದರೆ ಇಂದಿನ ದಿನಗಳಲ್ಲಿ ಅನೇಕರು ದುಂದುವೆಚ್ಚಗಳನ್ನು ಮಾಡುತ್ತಾರೆ. ಕಾಯಿಲೆಗಾಗಿ ಸಾವಿರ ಲಕ್ಷದಷ್ಟು ಹಣವನ್ನು ವೆಚ್ಚ ಮಾಡುತ್ತಾರೆ. ತಮ್ಮ ಸು:ಖ ಬೋಗಗಳಿಗಾಗಿ ತಮ್ಮ ಹಣವನ್ನು ವೆಚ್ಚ ಮಾಡುತ್ತಾರೆ. ಆದರೆ ಇಂತಹ ಅನಾಥರ ಸೇವೆಗಾಗಿ ಕೊಡಲು ಮನಸ್ಸು ಬರುವುದಿಲ್ಲ. ಈ ರೀತಿ ಮಾಡಿ ಉಪವಾಸ ಪ್ರಾರ್ಥನೆ ಮಾಡಿದರೆ ಏನು ಪ್ರಯೋಜನವಿಲ್ಲ. ಒಬ್ಬ ಸೇವಕರು ನನಗೆ ಗೊತ್ತು. ಪೂರ್ಣ ಸುವಾರ್ತ ಸಭೆ ಅವರದು ಅವರ ಸಭೆಯಿಂದ ಕೆಲವು ಸಮಯದ ಹಿಂದೆ 2 ಕುಟುಂಬದವರು ಬಂದು ಸ್ವಲ್ಪ ಹಳೆ ಬಟ್ಟೆಗಳನ್ನು ಆಶ್ರಮಕ್ಕೆ ಕೊಟ್ಟರು. ಇದನ್ನು ತಿಳಿದಂತಹ ದೇವಸೇವಕರು ಸಭೆಯಲ್ಲಿ ಅವರನ್ನು ನಿಂದಿಸಿ ಅವಮಾನ ಮಾಡಿದರಂತೆ. ಮಾತ್ರವಲ್ಲದೆ ಅಲ್ಲಿ ಆಶ್ರಮಕ್ಕೆ ಹೋಗಬಾರದು ಮತ್ತು ಏನು ಕೊಡಬಾರದು. ಹೋದರೆ, ಕೊಟ್ಟರೆ ಸಭೆಯಿಂದ ಹೊರಗೆ ಹಾಕುತ್ತೇನೆ ಎಂಬುದಾಗಿ ಬೆದರಿಕೆ ಹಾಕಿದರು ಎಂಬುದಾಗಿ ಆ ಕುಟುಂಬದವರು ಕಣ್ಣೀರಿನಿಂದ ನನಗೆ ಫೋನ್ ಮಾಡಿ ತಿಳಿಸಿದರು. ಇದನ್ನು ತಿಳಿದಂತಹ ನನಗೆ ತುಂಬಾ ದು:ಖವಾಯಿತು, ಅನೇಕ ಸೇವಕರು ಕೊಡಲು ತಮ್ಮ ವಿಶ್ವಾಸಿಗಳಿಗೆ ಕಲಿಸುತ್ತಾರೆ. ಅದು ದಶಮಭಾಗ, ಕಾಣಿಕೆ ಮಾತ್ರ. ಸತ್ಯವೇದದಲ್ಲಿ ವಿಧವೆಯರಿಗೆ, ದಿಕ್ಕಿಲ್ಲದ್ದವರಿಗೆ, ಅನಾಥರಿಗೆ ಕೊಡಬೇಕು ಎಂಬುದಾಗಿ ಬರೆಯಲ್ಪಟ್ಟಿದೆ. (ಧರ್ಮೋ. 15:7–8). ನಿಮ್ಮ ದೇವರಾದ ಯೆಹೋವನು ನಿಮಗೆ ಕೊಡುವ ದೇಶದ ಯಾವ ಊರಲ್ಲಿಯಾದರೂ ಸ್ವದೇಶದವನಾದ ಬಡವನು ಇದ್ದರೆ ನೀವು ಆ ಬಡ ಸಹೋದರನಿಗೆ ಮನಸ್ಸನ್ನು ಕಠಿಣ ಮಾಡಿಕೊಂಡು ಅವನಿಗೆ ಸಹಾಯಮಾಡದೆ ಇರಬಾರದು. ನೀವು ಕೈ ತೆರೆದು ಅವನ ಅವಸರಕ್ಕೆ ಬೇಕಾದದ್ದನ್ನು ಕೊಟ್ಟು ಸಹಾಯ ಮಾಡಬೇಕು. ಧರ್ಮೋ. 15:10–11 ನೀವು ಕೊಡುವಾಗ ಬೇಸರಗೊಳ್ಳದೆ ಉದಾರವಾದ ಮನಸ್ಸಿನಿಂದಲೇ ಕೊಡಬೇಕು. ಇದರಿಂದ ನಿಮ್ಮ ದೇವರಾದ ಯೆಹೋವನು ನಿಮ್ಮ ಎಲ್ಲಾ ಕೆಲಸಗಳಲ್ಲಿಯೂ, ಪ್ರಯತ್ನಗಳಲ್ಲಿಯೂ ನಿಮ್ಮನ್ನು ಅಭಿವೃದ್ಧಿಪಡಿಸುವನು. ದೇಶದಲ್ಲಿ ಯಾವಾಗಲೂ ಬಡವರು ಇರುವರಷ್ಟೆ. ಆದುದರಿಂದ ನೀವು ಸ್ವದೇಶದವರಾದ ಬಡವರಿಗೂ, ಗತಿ ಇಲ್ಲದವರಿಗೂ ಕೈ ನೀಡಿ ಸಹಾಯಮಾಡಬೇಕೆಂದು ಆಜ್ಞಾಪಿಸಿದ್ದೇನೆ.

ಮುಂದುವರೆಯುವದು.......

**ಪಾ॥ ಸುನಿಲ್ ಜಾನ್ ಡಿ'ಸೋಜಾ.**

---

## ವಿಶ್ವಾಸದ ಮನೆಗೆ ಭೇಟಿ ನೀಡಿದವರ ಅನಿಸಿಕೆಗಳು :

ಜನ ಸೇವೆ ಜನಾರ್ಧನ ಸೇವೆ ಆದರೂ ಮಕ್ಕಳು, ವಯೋವೃದ್ಧರು, ಕೈಲಾಗದವರು, ಮಾನಸಿಕ ಅಸ್ವಸ್ಥರು ತಮ್ಮನ್ನು ತಾವು ನೋಡಿಕೊಳ್ಳಲಾಗದವರು ದೇವರಿಗೆ ಸಮಾನರು. ಅಂಥವರ ಸೇವೆಮಾಡುವುದು, ಅವರನ್ನು ಮನುಷ್ಯನ ಮುಖ್ಯವಾಹಿನಿಗೆ ತರುವ ಪ್ರಯತ್ನ ನಿಜಕ್ಕೂ ಮಾನವ ಸಂಕುಲಕ್ಕೆ ಮಾಡುವ ಅನನ್ಯ ಸೇವೆ–ದೇವರ ಸೇವೆ.

ಈ ಸಂಸ್ಥೆಯಲ್ಲಿ ಇರುವ ಮಾನಸಿಕ ಅಸ್ವಸ್ಥರನ್ನು ನೋಡಿಕೊಳ್ಳುವುದು ಸುಲಭವಾದ್ದುದಲ್ಲ, ತನ್ನ ಜೀವನವನ್ನು ಅವರ ಸೇವೆಗೆ ಮುಡಿಪಾಗಿಟ್ಟವರು ಮಾತ್ರ ಮಾಡಬಹುದು.

ಇಲ್ಲಿರುವ ಸೇವಾ ಮನೋಭಾವನೆಯ ಕಾರ್ಯಕರ್ತರು ಸಂಸ್ಥೆಯ ಸಂಘಟಕರು ನಿಜಕ್ಕೂ ಆದರಣೀಯರು ಮತ್ತು ಅನುಕರಣೀಯರು.

ಮಾನವನ – ಉದ್ದಾರಕ್ಕೆ ಶ್ರಮಿಸುವ ಎಲ್ಲಾ ಮನುಜರಿಗೂ ಆದರ್ಶವಾದ ಸಂಸ್ಥೆ ಈ ಸಂಸ್ಥೆ.

ಇಲ್ಲಿ ಕೆಲಸ ನಿರ್ವಹಿಸುವ ಎಲ್ಲರಿಗೂ ಮತ್ತು ಸೇವೆ ಪಡೆದುಕೊಳ್ಳುತ್ತಿರುವ ವ್ಯಕ್ತಿಗಳಿಗಾಗಿ ದೇವರು ಆಯಸ್ಸು, ಆರೋಗ್ಯ ನೀಡಲೆಂದು ಆಶಿಸುತ್ತೇವೆ.

ಸರ್ವೇ ಜನಾ: ಸುಖಿನೋ ಭವಂತು, ಸಮಸ್ತ ಸರ್ವಂಗಳಾಗಿ ಭವಂತು.

**– ಫಣೇಂದ್ರ ಕೆ. ಎಸ್.**
ಜಿಲ್ಲಾ ನ್ಯಾಯಾಧೀಶರು, ಉಡುಪಿ.

ನೀನು ಉಸಿರಿದ ಧರ್ಮಶಾಸ್ತ್ರವು ಸಾವಿರಾರು ಚಿನ್ನ ಬೆಳ್ಳಿಯ ನಾಣ್ಯಗಳಗಿಂತಲೂ ನನಗೆ ಅತಿ ಪ್ರಿಯ (ಕೀರ್ತ. 119:72).

# ಸ್ಥಳೀಯ ಮತ್ತು ವಿದೇಶ ಸುದ್ಧಿ

* ವಿದ್ಯಾರ್ಥಿಗಳಿಗೆ ವಿಮೆ ಸೌಲಭ್ಯ : ವಿದ್ಯಾರ್ಥಿಗಳಿಗೆ ಜೀವ ವಿಮೆ ಮಾಡಿಸುವ ಹೊಸ ಯೋಜನೆಯನ್ನು ಮುಂದಿನ ವರ್ಷ ಜಾರಿಗೊಳಿಸಲು ಕೇಂದ್ರೀಯ ವಿದ್ಯಾಲಯ ಸಂಘಟನೆ (ಕೆವಿಎಸ್) ನಿರ್ಧರಿಸಿದೆ.
* ಈಗಾಗಲೇ ಬೆಲೆಯೇರಿಕೆಯ ಬಿಸಿಯಿಂದ ಬಸವಳಿದಿರುವ ಗ್ರಾಹಕರಿಗೆ ಇನ್ನೊಂದು ಸುತ್ತಿನ ಆಘಾತ ನೀಡಲು ಕೇಂದ್ರ ಸರ್ಕಾರ ಸಿದ್ಧವಾಗಿದೆ.
* ಇರಾನ್ ತೈಲ ಆಮದು ಸ್ಥಗಿತ : ಪಾಶ್ಚಾತ್ಯ ದೇಶಗಳ ನಿಷೇಧದ ಪರಿಣಾಮವಾಗಿ ಇರಾನ್‌ನ ತೈಲ ಸಂಸ್ಕರಣಾ ಕಂಪೆನಿಗಳಿಗೆ ವಿಮಾ ರಕ್ಷಣೆ ಕೊಡುವುದು ಅಸಾಧ್ಯ ಎಂದು ಅಲ್ಲಿನ ವಿಮಾ ಕಂಪೆನಿಗಳು ಹೇಳಿರುವ ಕಾರಣ ಆ ದೇಶದಿಂದ ಕಚ್ಚಾತೈಲ ಆಮದು ಸ್ಥಗಿತಗೊಳ್ಳಲಿದೆ ಎಂದು ಎಂಆರ್‌ಪಿಎಲ್ ಹೇಳಿದೆ.
* ಪ್ರಥಮ ಮಹಿಳಾ ಅಂಚೆ ಕಚೇರಿ ಶುರು : ಸರಕಾರ ದೇಶದ ಪ್ರಥಮ ಸರ್ವ ಮಹಿಳಾ ಅಂಚೆ ಕಚೇರಿಯನ್ನು ಇಲ್ಲಿ ಆರಂಭಿಸಿತು ಮತ್ತು ಮಹಿಳೆಯರೇ ಸಂಪೂರ್ಣವಾಗಿ ನಿರ್ವಹಿಸುವ ಇನ್ನಷ್ಟು ಇಂಥ ಶಾಖೆಗಳನ್ನು ತೆರೆಯಲಾಗುವುದೆಂದು ಪ್ರಕಟಿಸಿತು.
* ಭೂಮಿ 11,000 ವರ್ಷಗಳ ಹಿಂದೆ ಇರುವುದಕ್ಕಿಂತ ಈಗ ಹೆಚ್ಚು ಬಿಸಿಯಾಗಿದೆ ಎಂದು ವಿಜ್ಞಾನಿಗಳು ಹೇಳುತ್ತಿದ್ದಾರೆ. ಜಗತ್ತಿನಾದ್ಯಂತವಿರುವ 73 ತಾಣಗಳಿಂದ ಸಂಗ್ರಹಿಸಿರುವ ಪಳೆಯುಳಿಕೆಗಳು ಮತ್ತು ದತ್ತಾಂಶಗಳನ್ನು ವಿಶ್ಲೇಷಿಸುವ ಮೂಲಕ 11,300 ವರ್ಷ ಹಿಂದೆ ಇದ್ದ ವಾತಾವರಣ ಮತ್ತು ಈಗಿನ ವಾತಾವರಣವನ್ನು ಹೋಲಿಸಿ ನೋಡುವಲ್ಲಿ ವಿಜ್ಞಾನಿಗಳು ಸಫಲರಾಗಿದ್ದಾರೆ.
* ದಾದಾ ದಾಖಲೆ ಮುರಿದ ಧೋನಿ : ಆಸ್ಟ್ರೇಲಿಯ ವಿರುದ್ಧದ ಚೇತೋಹಾರಿ ಜಯದಿಂದ ಮಹೇಂದ್ರ ಸಿಂಗ್ ಧೋನಿ ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ ಭಾರತದ ಅತ್ಯಂತ ಯಶಸ್ವೀ ನಾಯಕರಾಗಿ ಹೊರಹೊಮ್ಮಿದ್ದಾರೆ. ಸೌರವ್ ಗಂಗೂಲಿ ಅವರ ದಾಖಲೆಯನ್ನು ಅಳಿಸಿದ್ದಾರೆ.
* ಕೇರಳ ಮಹಿಳೆಯರ ರಕ್ಷಣೆಗೆ ಇ – ಬಳೆಗಳು :– ಮಹಿಳೆಯರ ತಂಟೆಗೆ ಹೋಗುವಾಗ ಹುಷಾರ್, ಅವರು ಧರಿಸಿರುವ ಬಳೆಯೇ ನಿಮ್ಮನ್ನು ಎದುರಿಸುವ ಅಸ್ತ್ರವಾಗಿರಬಹುದು. ಅಪಾಯದ ಸಂದರ್ಭದಲ್ಲಿ ಪೊಲೀಸರಿಗೆ ಅಥವಾ ಮಹಿಳಾ ಸಂಘಟನೆಗಳಿಗೆ ತುರ್ತು ಸಂದೇಶ ರವಾನಿಸುವ ಬಳೆಗಳು ಮತ್ತಿತರ ವಿದ್ಯುನ್ಮಾನ ಉಪಕರಣಗಳ ಪ್ರಸ್ತಾವವೊಂದು ಸರಕಾರದ ಮುಂದಿದ್ದು, ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಸಂದರ್ಭದಲ್ಲಿ ಸರಕಾರ ಈ ಪ್ರಸ್ತಾವವನ್ನು ಗಂಭೀರವಾಗಿ ಪರಿಶೀಲಿಸುತ್ತಿದೆ ಎಂದು ಪಂಚಾಯತ್ ಮತ್ತು ಸಾಮಾಜಿಕ ಇಲಾಖೆಯ ಸಚಿವ ಎಂ.ಕೆ ಮುನೀರ್ ತಿಳಿಸಿದ್ದಾರೆ.
* ರಾಜ್ಯದಲ್ಲಿ ಮಾರ್ಚ್ 15ರ ಅನಂತರ ಅಧಿಕೃತವಾಗಿ ಲೋಡ್ ಶೆಡ್ಡಿಂಗ್ ಆರಂಭವಾಗಲಿದೆಯೇ? ಹೌದು ಎನ್ನುತ್ತವೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ (ಕೆಪಿಟಿಸಿಎಲ್) ಮೂಲಗಳು.
* ಆಮೋಘ ಆಟದ ಪ್ರದರ್ಶನ ನೀಡಿದ ಸ್ಪೇಯ್ನ್‌ನ ರಫೆಲ್ ನಡಾಲ್ ಅವರು ತನ್ನ ದೇಶದವರೇ ಆದ ಡೇವಿಡ್‌ಫೆರರ್ ಅವರನ್ನು ಸೋಲಿಸಿ ಮೆಕ್ಸಿಕನ್ ಓಪನ್ ಟೆನಿಸ್ ಕೂಟದ ಪ್ರಶಸ್ತಿ ಗೆದ್ದುಕೊಂಡಿದ್ದಾರೆ.

## ವಿಶೇಷ ಪ್ರಾರ್ಥನೆ :

ಪ್ರತಿ ತಿಂಗಳ ಮೊದಲನೇ ಶನಿವಾರ ಮಧ್ಯಾಹ್ನ 4–00ರಿಂದ 6–00 ಗಂಟೆಯವರೆಗೆ ಸ್ವಸ್ಥತೆಯ ಹಾಗೂ ಬಿಡುಗಡೆಯ ಆರಾಧನೆಯನ್ನು ಸಭಾಪಾಲಕರಾದ **ಸುನಿಲ್ ಜಾನ್ ಡಿ'ಸೋಜಾ** ಹಾಗೂ ತಂಡದವರ ನೇತೃತ್ವದಲ್ಲಿ ಡಿಜಿಎಮ್ ಬೇತೇಲ್ ಚರ್ಚ್ ಯೇಸುಪುರ, ಶಂಕರಪುರದಲ್ಲಿ ನಡೆಯುತ್ತಿದೆ. ಆಸಕ್ತಿಯುಳ್ಳ ಪ್ರತಿಯೊಬ್ಬರಿಗೂ ಆದರದ ಸ್ವಾಗತ. ರೋಗಿಗಳಿಗಾಗಿ ವಿಶೇಷವಾಗಿ ಪ್ರಾರ್ಥಿಸಲಾಗುವುದು. ಬನ್ನಿರಿ ಯೇಸುಕ್ರಿಸ್ತನು ಮಾಡುವ ಅದ್ಭುತಗಳನ್ನು ಹೊಂದಿಕೊಳ್ಳಿರಿ.

**"ದೆವ್ವಹಿಡಿದ ಬಹಳ ಜನರನ್ನು ಆತನ ಬಳಿಗೆ ಕರತಂದರು; ಆತನು ಮಾತು ಮಾತ್ರದಿಂದಲೇ ದೆವ್ವಗಳನ್ನು ಬಿಡಿಸಿದ್ದಲ್ಲದೆ ಮೈಯಲ್ಲಿ ನೆಟ್ಟಗಿಲ್ಲದವರೆಲ್ಲರನ್ನು ವಾಸಿಮಾಡಿದನು"** (ಮತ್ತಾ. 8:16).

***ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :***

**9902334941, 9964070654**

ಕರ್ತನೇ ನಮ್ಮ ದೇವರೇ, ನೀನು ಪ್ರಭಾವ ಮಾನ ಬಲಗಳನ್ನು ಹೊಂದುವದಕ್ಕೆ ಯೋಗ್ಯನಾಗಿದ್ದೀ (ಪ್ರಕ. 4:11).

# ಪ್ರಾರ್ಥನಾ ಸ್ವರ

ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆ ಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.

ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.

ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 7760139148**

**ಓದುಗರಿಗೆ ವಿಶೇಷ ಸೂಚನೆ :**

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 120/-ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 120/- ಮನಿಯಾರ್ಡರ್ /ಡಿಡಿ ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ <u>ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ</u> ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಯ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
ಸಂಪಾದಕರು, ದೇವರ ಸ್ವರ, ಬೇತೇಲ್ ಚರ್ಚ್,
ಯೇಸುಪುರ, ಶಂಕರಪುರ ಪೋಸ್ಟ್, ಉಡುಪಿ - 574 115 ಕರ್ನಾಟಕ, ಭಾರತ.
e: Editor_voiceofgod@hotmail.com
Website : www.divinegen.org

ನಮ್ಮ ಕಛೇರಿ ವಿಳಾಸ :
ಡಿಜಿಎಂ ಬೇತೇಲ್ ಕಛೇರಿ,
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Ph: (0820) 2589070, 200 2781
E-mial: dgmofficial@gmail.com

## ತಿಳುವಳಿಕೆಯ ಸ್ವರ

# ಹಳೇ ಮತ್ತು ಹೊಸ ಒಡಂಬಡಿಕೆಗಳ ತಾರತಮ್ಯ
# ನಾನೂರು ವರ್ಷಗಳ ಮೌನಕಾಲ (ಕ್ರಿಸ್ತನು)

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**ಪಾಪಿಗಳಾದ ಮಾನವರ ಪಾಪ ಪರಿಹಾರಕ್ಕಾಗಿಯೂ ರಕ್ಷಣೆಗಾಗಿಯೂ ದೇವರ ರಕ್ಷಣಾ ಕಾರ್ಯದಲ್ಲಿ ಉಪಯೋಗಿಸಲ್ಪಟ್ಟವರು :-**

1. **ಗಬ್ರಿಯೇಲನೆಂಬ ದೇವದೂತನು :** ಆರನೆಯ ತಿಂಗಳಲ್ಲಿ ದೇವರು ಗಬ್ರಿಯೇಲನೆಂಬ ತನ್ನ ದೂತನನ್ನು ಗಲಿಲಾಯ ಸೀಮೆಯ ನಜರೇತೆಂಬ ಊರಿಗೆ ಒಬ್ಬ ಕನ್ಯೆಯ ಬಳಿಗೆ ಕಳುಹಿಸಿದನು; (ಲೂಕ. 1:26)

2. **ಮರಿಯಳು :** ಆ ಕನ್ಯೆಯ ಹೆಸರು ಮರಿಯಳು.......... ಆ ದೂತನು ಆಕೆಯ ಬಳಿಗೆ ಬಂದು ದೇವರ ದಯೆ ಹೊಂದಿದವಳೇ, ನಿನಗೆ ಶುಭವಾಗಲಿ; ಕರ್ತನು ನಿನ್ನ ಸಂಗಡ ಇದ್ದಾನೆ. ಅಂದನು.................ಇಗೋ, ನೀನು ಗರ್ಭಿಣಿಯಾಗಿ ಒಬ್ಬ ಮಗನನ್ನು ಹೆರುವಿ; ಆತನಿಗೆ ಯೇಸುವೆಂದು ಹೆಸರಿಡಬೇಕು. (ಲೂಕ. 1:27–28–31).

3. **ಪವಿತ್ರಾತ್ಮ :** ನಿನ್ನ ಮೇಲೆ ಪವಿತ್ರಾತ್ಮ ಬರುವುದು; ಪರಾತ್ಪರನ ಶಕ್ತಿಯ ನೆರಳು ನಿನ್ನ ಮೇಲೆ ಬೀಳುವುದು; ಆದರಿಂದ ಹುಟ್ಟುವ ಆ ಪವಿತ್ರ ಶಿಶು ದೇವರ ಮಗನೆನಿಸಿಕೊಳ್ಳುವುದು (ಲೂಕ. 1:35).

4. **ಯೋಸೇಫನು:** ಯೇಸುಕ್ರಿಸ್ತನ ಜನನವು ಹೇಗಾಯಿತೆಂದರೆ ಆತನ ತಾಯಿಯಾದ ಮರಿಯಳನ್ನು ಯೋಸೇಫನಿಗೆ ನಿಶ್ಚಯಮಾಡಿರಲಾಗಿ ಅವರು ಕೂಡುವುದಕ್ಕಿಂತ ಮುಂಚೆ ಆಕೆಯು ಪವಿತ್ರಾತ್ಮದಿಂದ ಬಸುರಾಗಿದ್ದದ್ದು ತಿಳಿಯಬಂತು. ಆದರೆ ಆಕೆಯ ಗಂಡನಾದ ಯೋಸೇಫನು ಸಜ್ಜನನಾಗಿದ್ದು ಆಕೆಯನ್ನು ಬೈಲಿಗೆ ತರುವುದಕ್ಕೆ ಮನಸ್ಸಿಲ್ಲದೆ, ಯಾರಿಗೂ ತಿಳಿಯದಂತೆ ಆಕೆಯನ್ನು ಬಿಟ್ಟುಬಿಡಬೇಕೆಂದಿದ್ದನು (ಮತ್ತಾ. 1:18–19).

5. **ಮಹಾಯಾಜಕರೂ ಶಾಸ್ತ್ರಿಗಳೂ :** ಮಹಾಯಾಜಕರೂ ಶಾಸ್ತ್ರಿಗಳೂ ಯೇಸುವನ್ನು ಕೊಲ್ಲಬೇಕೆಂದಿದ್ದು ಜನರಿಗೆ ಹೆದರಿ ತಕ್ಕ ಮಾರ್ಗವನ್ನು ಹುಡುಕುತ್ತಿದ್ದರು (ಲೂಕ. 22:2).

6. **ಸೈತಾನನು :** ಆಗ ಸೈತಾನನು ಹನ್ನೆರಡು ಮಂದಿ ಶಿಷ್ಯರ ಲೆಕ್ಕದಲ್ಲಿ ಸೇರಿದವನಾದ ಇಸ್ಕರಿಯೋತನೆಂಬ ಯೂದನಲ್ಲಿ ಪ್ರವೇಶಿಸಲು ಅವನು ಮಹಾಯಾಜಕರ ಬಳಿಗೂ ಕಾವಲಿನ ದಳವಾಯಿಗಳ ಬಳಿಗೂ ಹೋಗಿ ತಾನು ಯೇಸುವನ್ನು ಹಿಡುಕೊಡುವ ಉಪಾಯವನ್ನು ಕುರಿತು ಅವರ ಸಂಗಡ ಮಾತಾಡಿದನು (ಲೂಕ. 22:3–4).

7. **ಯೆಹೂದ್ಯರು :** ಈ ಮಾತನ್ನು ಹೇಳಿದ್ದರಿಂದ ಆತನು (ಯೇಸು) ಸಬ್ಬತ್ ದಿನವನ್ನು ಅಲಕ್ಷ್ಯ ಮಾಡಿದ್ದಲ್ಲದೆ ದೇವರನ್ನು ತನ್ನ ತಂದೆ ಎಂದು ಹೇಳಿ ತನ್ನನ್ನು ದೇವರಿಗೆ ಪ್ರತಿಷ್ಠೆ ಮಾಡಿದ್ದರು ಆತನನ್ನು ಕೊಲ್ಲುವುದಕ್ಕೆ ಮತ್ತಷ್ಟು ಪ್ರಯತ್ನ ಮಾಡಿದರು (ಯೋಹಾ. 5:18, 7:1).

8. **ಯೂದನು :** ಅವರು ಊಟಕ್ಕೆ ಕೂತುಕೊಂಡಿದ್ದರು. ಅಷ್ಟರೊಳಗೆ ಸೈತಾನನು ಸೀಮೋನನ ಮಗನಾದ ಇಸ್ಕರಿಯೋತ ಯೂದನ ಮನಸ್ಸಿನಲ್ಲಿ ಯೇಸುವನ್ನು ಹಿಡುಕೊಡಬೇಕೆಂಬ ಆಲೋಚನೆಯನ್ನು ಹುಟ್ಟಿಸಿದ್ದನು (ಯೋಹಾ. 13:2). ಅದಕ್ಕೆ ಯೇಸು ನಾನು ಈ ತುತ್ತನ್ನು ಅದ್ದಿ ಯಾರಿಗೆ ಕೊಡುತ್ತೇನೋ ಅವನೇ ಎಂದು ಹೇಳಿ ಆ ತುತ್ತನ್ನು ಅದ್ದಿ ತೆಗೆದು ಇಸ್ಕರಿಯೋತ ಸೀಮೋನನ ಮಗನಾದ ಯೂದನಿಗೆ ಕೊಟ್ಟನು. ಅವನು ಆ ತುತ್ತನ್ನು ತೆಗೆದುಕೊಂಡ ಕೂಡಲೇ ಸೈತಾನನು ಅವನೊಳಗೆ ಹೊಕ್ಕನು (ಯೋಹಾ. 13:26–27).

9. **ಮಹಾಯಾಜಕನಾದ ಕಾಯಫನು :** ಆದರೆ ಅವರಲ್ಲಿ ಕಾಯಫನೆಂಬವನೊಬ್ಬನು ಆ ವರುಷಕ್ಕೆ ಮಹಾಯಾಜಕನಾಗಿದ್ದು ಅವರಿಗೆ ನಿಮಗೇನೂ ತಿಳಿಯುವುದಿಲ್ಲ; ಜನವೆಲ್ಲಾ ನಾಶವಾಗುವುದಕ್ಕಿಂತ ಒಬ್ಬ ಮನುಷ್ಯನು ಜನರಿಗೋಸ್ಕರ ಸಾಯುವುದು ನಿಮಗೆ ಹಿತವೆಂದು ನೀವು ಆಲೋಚಿಸುವುದೂ ಇಲ್ಲ ಎಂಬುದಾಗಿ ಹೇಳಿದನು. ಇದನ್ನು ಅವನು ತನ್ನಷ್ಟಕ್ಕೆ ತಾನೇ ಹೇಳಲಿಲ್ಲ. ಆದರೆ ತಾನು ಆ ವರುಷದ ಮಹಾಯಾಜಕನಾಗಿದ್ದದರಿಂದ ದೇವಪ್ರೇರಣೆಯಿಂದ ಮಾತಾಡಿ ಯೇಸು ಆ ಜನರಿಗೋಸ್ಕರ ಸಾಯುವುದಕ್ಕಿದ್ದನೆಂದು ಹೇಳಿದನು (ಯೋಹಾ. 11:49–51). ಆಗ ಅನ್ನನು ಆತನನ್ನು ಕಟ್ಟಿಸಿ ಮಹಾಯಾಜಕನಾದ ಕಾಯಫನ ಬಳಿಗೆ ಕಳುಹಿಸಿಕೊಟ್ಟನು (ಯೋಹಾ. 18:24).

10. **ಸಿಪಾಯಿಗಳ ಪಟಾಲಮು :** ಮಹಾಯಾಜಕರು ಮತ್ತು ಪರಿಸಾಯರು ಕೊಟ್ಟ ಓಲೇಕಾರರು : – ಹೀಗಿರಲಾಗಿ ಯೂದನು ಸಿಪಾಯಿಗಳ ಪಟಾಲಮನ್ನೂ ಮಹಾಯಾಜಕರು ಮತ್ತು ಪರಿಸಾಯರು ಕೊಟ್ಟ

ಯೆಹೋವನು ಎಲ್ಲಾ ಜನಾಂಗಗಳಲ್ಲಿ ಮಹೋನ್ನತನು; ಆತನ ಪ್ರಭಾವವು ಮೇಲಣ ಲೋಕಗಳಲ್ಲಿ ಮೆರೆಯುತ್ತದೆ (ಕೀರ್ತ. 113:4).

ಓಲೇಕಾರರನ್ನು ಕರೆದುಕೊಂಡು ದೀವಿಟಿಗಳನ್ನೂ, ಪಂಜುಗಳನ್ನೂ, ಆಯುದಗಳನ್ನೂ ಹಿಡಿಸಿಕೊಂಡು ಅಲ್ಲಿಗೆ ಬಂದನು (ಯೋಹಾ. 18:3).

11. **ಸಿಪಾಯಿಗಳೂ, ಸಹಸ್ರಾಧಿಪತಿಯೂ, ಯೆಹೂದ್ಯರ ಓಲೇಕಾರರೂ :** ಆ ಮೇಲೆ ಆ ಸಿಪಾಯಿಗಳೂ, ಸಹಸ್ರಾಧಿಪತಿಯೂ ಯೆಹೂದ್ಯರ ಓಲೇಕಾರರೂ ಯೇಸುವನ್ನು ಹಿಡಿದುಕೊಂಡು ಕಟ್ಟಿ (ಯೋಹಾ. 18:12).

12. **ಅನ್ನನು :** ಮೊದಲು ಅನ್ನನ ಬಳಿಗೆ ಕರೆದುಕೊಂಡು ಹೋದರು. ಇವನು ಆ ವರುಷದಲ್ಲಿ ಮಹಾಯಾಜಕನಾಗಿದ್ದ ಕಾಯಫನ ಮಾವನಾಗಿದ್ದನು (ಯೋಹಾ. 18:12).

13. **ಮಹಾಯಾಜಕನು :** ಅಷ್ಟರೊಳಗೆ ಮಹಾಯಾಜಕನು ಯೇಸುವನ್ನು ಆತನ ಶಿಷ್ಯರ ವಿಷಯವಾಗಿಯೂ ಉಪದೇಶದ ವಿಷಯವಾಗಿಯೂ ವಿಚಾರಿಸಿದನು (ಯೋಹಾ. 18:19).

14. **ಪಿಲಾತನು :** ಆಗ ಪಿಲಾತನು ತಿರುಗಿ ಅರಮನೆಯೊಳಕ್ಕೆ ಹೋಗಿ ಯೇಸುವನ್ನು ಕರೆದು ಆತನನ್ನು ನೀನು ಯೆಹೂದ್ಯರ ಅರಸನು ಹೌದೋ ಎಂದು ಕೇಳಿದನು (ಯೋಹಾ. 18:33).

15. **ಪಿಲಾತನ ಹೆಂಡತಿ (ಕ್ಲೌಡೀಯ ಪ್ರಫುಲ್ಲ):** ಇದಲ್ಲದೆ ಅವನು (ಪಿಲಾತನು) ನ್ಯಾಯಾಸನದಲ್ಲಿ ಕೂತಿರುವಾಗ ಅವನ ಹೆಂಡತಿಯು ನೀನು ಆ ಸತ್ಪುರುಷನ ಗೊಡವೆಗೆ ಹೋಗಬೇಡ (ಮತ್ತಾ. 27:19).

16. **ಮಹಾಯಾಜಕರೂ ಹಿರಿಯರೂ :** ಅತ್ತಲಾಗಿ ಮಹಾಯಾಜಕರೂ ಹಿರಿಯರೂ ಬರಬ್ಬನನ್ನು ಬಿಟ್ಟುಕೊಡಬೇಕೆಂದು ಬೇಡಿಕೊಳ್ಳುವ ಹಾಗೂ ಯೇಸುವನ್ನು ನಾಶಗೊಳಿಸುವ ಹಾಗೂ ಜನರನ್ನು ಒಡಂಬಡಿಸಿದರು (ಮತ್ತಾ. 27:20).

17. **ದೇಶಾಧಿಪತಿಯ (ಪಿಲಾತನ) ಸಿಪಾಯಿಗಳು :** ಆ ಮೇಲೆ ದೇಶಾಧಿಪತಿಯ ಸಿಪಾಯಿಗಳು ಯೇಸುವನ್ನು ಅರಮನೆಯೊಳಕ್ಕೆ ತೆಗೆದುಕೊಂಡು ಹೋಗಿ ಪಟಾಲಮನ್ನೆಲ್ಲಾ ಆತನ ಸುತ್ತಲು ಕೂಡಿಸಿಕೊಂಡು ಆತನ ಬಟ್ಟೆಗಳನ್ನು ತೆಗೆದುಹಾಕಿ ಕೆಂಪು ಒಲ್ಲಿಯನ್ನು ಹೊದಿಸಿ, ಮುಳ್ಳು ಬಳ್ಳಿಯಿಂದ ಕಿರೀಟವನ್ನು ಹೆಣೆದು ಆತನ ತಲೆಯ ಮೇಲೆ ಇಟ್ಟು ಬಲಗೈಯಲ್ಲಿ ಬೆತ್ತವನ್ನು ಕೊಟ್ಟು ಆತನ ಮುಂದೆ ಮೊಣಕಾಲೂರಿ ಯೆಹೂದ್ಯರ ಅರಸನೇ, ನಿನಗೆ ನಮಸ್ಕಾರ ಎಂದು ಆತನನ್ನು ಪರಿಹಾಸ್ಯ ಮಾಡಿದರು ಮತ್ತು ಆತನ ಮೇಲೆ ಉಗುಳಿ ಆ ಬೆತ್ತವನ್ನು ಕಸಕೊಂಡು ಆತನ ತಲೆಯ ಮೇಲೆ ಹೊಡೆದರು. ಹೀಗೆ ಆತನನ್ನು ಪರಿಹಾಸ್ಯ ಮಾಡಿದ ಮೇಲೆ ಆ ಒಲ್ಲಿಯನ್ನು ತೆಗೆದು ಆತನ ಬಟ್ಟೆಗಳನ್ನು ಹೊದಿಸಿ ಆತನನ್ನು ಶಿಲುಬೆಗೆ ಹಾಕುವುದಕ್ಕೆ ತೆಗೆದುಕೊಂಡು ಹೋದರು (ಮತ್ತಾ. 27:27–31).

18. **ಹೆರೋದನು :** ಕಡೆಗೆ ಹೆರೋದನು ತನ್ನ ಸಿಪಾಯಿಗಳನ್ನು ಕೂಡಿಕೊಂಡು ಆತನನ್ನು ತಿರಸ್ಕರಿಸಿ ಹಾಸ್ಯಮಾಡಿ ಶೋಭಾಯಮಾನವಾದ ಉಡುಪನ್ನು ಹಾಕಿಸಿ ಪಿಲಾತನ ಬಳಿಗೆ ತಿರುಗಿ ಕಳುಹಿಸಿಕೊಟ್ಟನು (ಲೂಕ. 23:11).

19. **ಕುರೇನ ಪಟ್ಟಣದ ಸೀಮೋನನು :** ಹೊರಕ್ಕೆ ಹೋಗುತ್ತಿರುವಾಗ ಕುರೇನ ಪಟ್ಟಣದ ಸೀಮೋನನೆಂಬುವನನ್ನು ಕಂಡು ಅವನನ್ನು ಆತನ ಶಿಲುಬೆಯನ್ನು ಹೊರುವುದಕ್ಕೆ ಬಿಟ್ಟೀ ಹಿಡಿದರು (ಮತ್ತಾ. 27:32).

20. **ಸಿಪಾಯಿಗಳು :** ಸಿಪಾಯಿಗಳು ಯೇಸುವನ್ನು ಶಿಲುಬೆಗೆ ಹಾಕಿದ ಮೇಲೆ ಅವರು ಆತನ ಮೇಲು ಹೊದಿಕೆಗಳನ್ನು ತಕ್ಕೊಂಡು ನಾಲ್ಕು ಪಾಲು ಮಾಡಿ ಒಬ್ಬೊಬ್ಬ ಸಿಪಾಯಿಗೆ ಒಂದೊಂದು ಪಾಲಿನ ಪ್ರಕಾರ ಹಂಚಿಕೊಂಡರು. ಆತನ ಒಳ ಅಂಗಿಯನ್ನು ಸಹ ತಕ್ಕೊಂಡರು; ಆದರೆ ಆ ಅಂಗಿಗೆ ಹೊಲಿಗೆ ಇರಲಿಲ್ಲ, ಅದು ಮೇಲಿನಿಂದ ಅಖಂಡವಾಗಿ ಹೆಣೆದದ್ದಾಗಿತ್ತು. ಅದನ್ನು ನೋಡಿ ಅವರು ನಾವು ಇದನ್ನು ಹರಿಯಬಾರದು; ಚೀಟು ಹಾಕಿ ಇದು ಯಾರಿಗೆ ಬರುವುದೋ ನೋಡೋಣ ಎಂದು ಮಾತಾಡಿಕೊಂಡರು (ಯೋಹಾ. 19:23–24).

21. **ಜನರು :** ಜನರು ನೋಡುತ್ತಾ ನಿಂತರು (ಲೂಕ. 23:35).

22. **ಅಧಿಕಾರಿಗಳು :** ಇದಲ್ಲದೆ ಅಧಿಕಾರಿಗಳು ಹಾಸ್ಯಮಾಡಿ ಅವನು ಮತ್ತೊಬ್ಬರನ್ನು ರಕ್ಷಿಸಿದನು; ಅವನು ದೇವರಾರಿಸಿಕೊಂಡ ಕ್ರಿಸ್ತನು ಆಗಿದ್ದರೆ ತನ್ನನ್ನು ತಾನೇ ರಕ್ಷಿಸಿಕೊಳ್ಳಲಿ ಅಂದರು (ಲೂಕ. 23:35).

23. **ತೂಗು ಹಾಕಿದ್ದ ದುಷ್ಕರ್ಮಿಗಳಲ್ಲಿ ಒಬ್ಬನು :** ತೂಗು ಹಾಕಿದ್ದ ಆ ದುಷ್ಕರ್ಮಿಗಳಲ್ಲಿ ಒಬ್ಬನು ಆತನನ್ನು ದೂಷಿಸಿ ನೀನು ಬರಬೇಕಾದ ಕ್ರಿಸ್ತನಲ್ಲವೇ, ನಿನ್ನನ್ನು ರಕ್ಷಿಸಿಕೋ, ನಮ್ಮನ್ನೂ ರಕ್ಷಿಸು (ಲೂಕ. 23:39).

24. **ತೂಗು ಹಾಕಿದ್ದ ಎರಡನೇ ದುಷ್ಕರ್ಮಿ :** ಎಂದು ಹೇಳಿದ್ದಕ್ಕೆ ಎರಡನೆಯವನು ಅವನನ್ನು ಗದರಿಸಿ ನೀನು ಇದೇ ದಂಡನೆಯಲ್ಲಿರುವಾಗಲೂ ದೇವರಿಗೆ ಹೆದರುವುದಿಲ್ಲವೋ?

ನಿನ್ನ ಚಿತ್ತವನ್ನು ತಿಳಿಯಪಡಿಸಿ ನನ್ನನ್ನು ನಡಿಸಿ ತರುವಾಯ ಮಹಿಮೆಗೆ ಸೇರಿಸಿಕೊಳ್ಳುವಿ (ಕೀರ್ತ. 73:24).

ನಾವಂತೂ ನ್ಯಾಯವಾಗಿ ದಂಡನೆಯಲ್ಲಿದ್ದೇವೆ. ನಾವು ಮಾಡಿದ್ದಕ್ಕೆ ತಕ್ಕ ಪ್ರತಿಫಲವನ್ನು ಹೊಂದುತ್ತಾ ಇದ್ದೇವೆ; ಈತನಾದರೋ ಅಲ್ಲದ್ದೇನೂ ಮಾಡಲಿಲ್ಲ ಎಂದು ಹೇಳಿ ಯೇಸುವೇ, ನೀನು ನನ್ನ ರಾಜ್ಯವನ್ನು ಪಡೆದವನಾಗಿ ಬರುವಾಗ ನನ್ನನ್ನು ನೆನೆಸಿಕೋ ಅಂದನು (ಲೂಕ. 23:40–42).

25. **ಶತಾಧಿಪತಿ :** ಶತಾಧಿಪತಿಯು ನಡೆದ ಸಂಗತಿಯನ್ನು ನೋಡಿ ಈ ಮನುಷ್ಯನು ಸತ್ಪುರುಷನೇ ನಿಜ ಎಂದು ದೇವರನ್ನು ಕೊಂಡಾಡಿದನು (ಲೂಕ. 23:47).

26. **ನೋಟಕ್ಕಾಗಿ ಬಂದಿದ್ದ ಜನರು :** ಈ (ಶಿಲುಬೆಯ) ನೋಟಕ್ಕಾಗಿ ಕೂಡಿ ಬಂದಿದ್ದ ಜನರೆಲ್ಲರೂ ನಡೆದ ಸಂಗತಿಯನ್ನು ನೋಡಿ ಎದೆ ಬಡುಕೊಳ್ಳುತ್ತಾ ಹಿಂತಿರುಗಿ ಹೋದರು (ಲೂಕ. 23:48).

27. **ಪರಿಚಿತಿಯವರೂ ಸ್ತ್ರೀಯರೂ :** ಇದಲ್ಲದೆ ಆತನ ಪರಿಚಿತಿಯವರೆಲ್ಲರೂ ಗಲಿಲಾಯದಿಂದ ಆತನ ಹಿಂದೆ ಬಂದಿದ್ದ ಸ್ತ್ರೀಯರೂ ದೂರದಲ್ಲಿ ನಿಂತು ಈ ಸಂಗತಿಗಳನ್ನು ನೋಡುತ್ತಿದ್ದರು (ಲೂಕ. 23:49).

28. **ಅರಿಮಥಾಯದ ಯೋಸೇಫನು :** ಅವನು ಹಿರೀ ಸಭೆಯವರ ಆಲೋಚನೆಗೂ, ಕೃತ್ಯಕ್ಕೂ ಸಮ್ಮತಿ ಪಟ್ಟಿರಲಿಲ್ಲ.

29. **ಕಾವಲುಗಾರರು :** ಮರುದಿನ ಅಂದರೆ ಸೌರಣೆಯ ದಿನ ಕಳೆದ ಮೇಲೆ ಮಹಾಯಾಜಕರೂ ಪರಿಸಾಯರೂ ಪಿಲಾತನ ಬಳಿಗೆ ಕೂಡಿ ಬಂದು ದೊರೆಯೇ, ಆ ಮೋಸಗಾರನು ಬದುಕಿದ್ದಾಗ ತಾನು ಮೂರು ದಿನದ ಮೇಲೆ ಏಳುತ್ತೇನೆ ಅಂತ ಹೇಳಿದ್ದು ನಮ್ಮ ನೆನಪಿಗೆ ಬಂತು; ಆದಕಾರಣ ಮೂರನೆಯ ದಿನದ ತನಕ ಸಮಾಧಿಯನ್ನು ಭದ್ರ ಮಾಡಿ ಕಾಯುವುದಕ್ಕೆ ಅಪ್ಪಣೆಕೊಡಬೇಕು; ಇಲ್ಲದಿದ್ದರೆ ಆತನ ಶಿಷ್ಯರು ಬಂದು ಅವನನ್ನು ಕದ್ದುಕೊಂಡು ಹೋಗಿ ಸತ್ತವನು ಬದುಕಿ ಬಂದಿದ್ದಾನೆ ಎಂದು ಹೇಳಾರು; ಆಗ ಮೊದಲನೆಯ ಮೋಸಕ್ಕಿಂತ ಕಡೆಯ ಮೋಸವು ಕೆಡುಕಾದೀತು ಅಂದರು. ಪಿಲಾತನು ಅವರಿಗೆ ಕಾವಲುಗಾರರನ್ನು ತಕ್ಕೊಳ್ಳಿ; ಹೋಗಿ ನಿಮಗೆ ತಿಳಿದ ಹಾಗೆ ಭದ್ರಮಾಡಿ ಕಾಯಿರಿ ಎಂದು ಹೇಳಲಾಗಿ ಅವರು ಹೊರಟು ಕಾವಲುಗಾರರೊಂದಿಗೆ ಆ ಕಲ್ಲಿಗೆ ಮುದ್ರ ಹಾಕಿ ಸಮಾಧಿಯನ್ನು ಭದ್ರಮಾಡಿದು (ಮತ್ತಾ. 27:62–66).

ಮೇಲೆ ವಿವರಿಸಿದ ವಿಷಯಗಳಿಂದ ಕೀರ್ತ. 2:1, 22:41:9, ಯೆಶಾ. 7:14; 50:6–7, 52:14, 53:12, ಅಪೋ. 3:17–18; 13:26–29 ಇವುಗಳಲ್ಲಿ ಬರೆದ ಪ್ರವಾದನೆಗಳು ಪೂರೈಕೆಯಾದವು.

ಈ ಪ್ರವಾದನೆಗಳು ದೇವರ ರಕ್ಷಣಾ ಕಾರ್ಯವು ನೆರವೇರುವುದಕ್ಕಾಗಿ ಉಪಯೋಗವಾದವರು ತಪ್ಪು ಮಾಡಿರುವರು. ಇವರ ತಪ್ಪಿನ ಕ್ಷಮೆಗೆ ಯೇಸು ಸ್ವಾಮಿಯು ಶಿಲುಬೆಯಲ್ಲಿ ಮೊದಲಾಗಿ **"ತಂದೆಯೇ ಅವರಿಗೆ ಕ್ಷಮಿಸು; ತಾವು (ತಮ್ಮ ಕಾರ್ಯಗಳ ಮುಖಾಂತರ ಪ್ರವಾದನೆಗಳನ್ನು ಪೂರೈಸುತ್ತಾರೆಂದು) ಏನು ಮಾಡುತ್ತೇವೆಂಬುದನ್ನು ಅರಿಯರು",** ಎಂದು ದೇವರಲ್ಲಿ ಪ್ರಾರ್ಥಿಸಿದನು. ತಪ್ಪು ಮಾಡಿದವರು ಯಥಾರ್ಥವಾಗಿ ಪಶ್ಚಾತ್ತಾಪ ಪಟ್ಟು ಶಿಲುಬೆಯ ಬಳಿಗೆ ಬಂದು ಕ್ಷಮೆಹೊಂದಿ ಮಾನಸಾಂತರ ಪಡಬಹುದಿತ್ತು. ಸತ್ಯವೇದದ ಆಧಾರದಂತೆ ಪೇತ್ರನು ಮತ್ತು ಕ್ರೂಜಿತನಾದ ಒಬ್ಬ ಕಳ್ಳನು ಮಾನಸಾಂತರ ಹೊಂದಿರುವುದನ್ನು ನಾವು ಓದುತ್ತೇವೆ. ಇತರರ ವಿಷಯ ಏನೂ ಬರೆದಿರುವುದನ್ನು ನಾವು ಕಾಣುವುದಿಲ್ಲ.

ಮುಂದುವರಿಯುವುದು....

**ಸಹೋ। ಎಲಿಜಬೆತ್ ಡಿ'ಸೋಜಾ**

## ಆಶ್ರಮದ ಅವಶ್ಯಕತೆಗಳು

1. **30 ಟೇಬಲ್**
2. **60 ಬೆಂಚ್**
3. **ಟೆಂಪೋ ಟ್ರಾವಲ್ಸ್**
4. **ಅಕ್ಕಿ, ಸಕ್ಕರೆ, ದವಸಧಾನ್ಯ**

**ದಾನಿಗಳು : ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ**

**9902334941, 08202002781, 09964070654.**

ನನಗೆ ರಕ್ಷಣೆಯ ವಸ್ತ್ರವನ್ನು ಹೊದಿಸಿ ಧರ್ಮವೆಂಬ ನಿಲುವಂಗಿಯನ್ನು ತೊಡಿಸಿದನು (ಯೆಶಾ. 61:10).

# ಇಸ್ರಾಯೆಲ್

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ರಾತ್ಚ್ಯಾವೆಳಿಂ ಜಾಕೊಬ್ ಎಕ್ಸುರೊ ಬೊಸುನ್ ಆಸ್ತಾನಾ ಆವ್ಚಿತ್ ಎಕ್ ಮನಿಸ್ ಆಯ್ಲೊ ಆನಿಂ ತಾಚ್ಯಾಕಡೆಂ ಝುಗ್ಡೊಂಕ್ ಲಾಗ್ಲೊ! ಜಾಕೊಬ್ ಬಳಾದೀಕ್ ಜಾಲ್ಲ್ಯಾನ್ ಆನಿಂ ದೀಸ್ ಉಜ್ವಾಡೊಂಕ್ ಥೊಡೊಚ್ಚ್ ವೇಳ್ ಉರಲ್ಲ್ಯಾನ್ ತ್ಯಾ ಮನ್ಶ್ಯಾನ್ ಜಾಕೊಬಾಚ್ಯಾ ಜಾಂಗ್ಯಾರ್ ಎಕ್ ಬಳಾದೀಕ್ ಮಾರ್ ಬಸಯ್ಲೊ! ಪುಣ್ ಜಾಕೊಬ್ ತರೀಯ್ ತಿ ದೂಕ್ ಘೇವ್ನ್ ಝುಗ್ಡೊನಂಚ್ಚ್ ಆಸಲ್ಲೊ.

"ಮ್ಹಾಕಾ ವಚುಂಕ್ ಸೋಡ್" ತ್ಯಾ ಮನ್ಶ್ಯಾನ್ ಆಡ್ದೊಸ್ ಮಾಗ್ಲೊ.

"ಮ್ಹಾಕಾ ಬೆಸಾಂವ್ ದಿಲ್ಲ್ಯಾ ಖರಿತ್ ಹಾಂವ್ ತುಕಾ ವಚುಂಕ್ ಸೊಡ್ಚೊನಾ" ಜಾಕೊಬಾನ್ ಜಾಪ್ ದಿಲಿ.

"ತುಜೆಂ ನಾಂವ್ ಕಿತೆಂ?" ತ್ಯಾ ಮನ್ಶ್ಯಾನ್ ಪಾಟಿಂ ಸವಾಲ್ ಕೆಲೆಂ.

"ಮ್ಹಜೆಂ ನಾಂವ್ ಜಾಕೊಬ್" ಜಾಕೊಬಾನ್ ಜಾಪ್ ದಿಲಿ.

ತಿತ್ಲೆಂ ಆಯ್ಕೊನ್ ತೊ ಮನಿಸ್ ಮ್ಹಣಾಲಾಗ್ಲೊ "ತುಂ ದೇವಾಕಡೆಂ ಆನಿಂ ಮನ್ಶ್ಯಾಕಡೆಂ ಝುಗ್ಡೊನ್ ಜಿಕ್ಲಾಯ್ ದೆಕುನ್ ಆಯ್ಚ್ಯಾನ್ ತುಕಾ "ಇಸ್ರಾಯೇಲ್!!" ಮ್ಹಣ್ ನಾಂವ್ ಯೆತೆಲೆಂ."

ತವಳ್ ಜಾಕೊಬಾನ್ "ತುಜೆಂ ನಾಂವ್ ಕಿತೆಂ?" ಮ್ಹಣ್ ವಿಚಾರ್ಲೆಂ ಪುಣ್ ತೊ ಮನಿಸ್ "ಮ್ಹಜೆಂ ನಾಂವ್ ತುಕಾ ಕಿತ್ಯಾಕ್?" ಮ್ಹಳ್ಳ್ಯಾ ಉತ್ರಾಂ ಬರಾಬರ್ ಕಿತೆಂಚ್ಚ್ ಜಾಪ್ ದಿನಾಸ್ತಾಂ ಜಾಕೊಬಾಕ್ ಆಶೀರ್ವಾದ್ ದೀವ್ನ್ ಚಲ್ತಚ್ ರಾವ್ಲೊ.

ತೆದ್ನಾ ಜಾಕೊಬ್ "ಹಾಂವೆಂ ಸರ್ವೆಸ್ಪರ್ ದೇವಾಚೆಂ ತೊಂಡ್ ದೆಖ್ಲೆಂ ಆನಿಂ ಹಾಂವ್ ವಾಂಚೊನ್ ಉರ್ಲೊಂ" ಮ್ಹಣ್ ಸಂತೊಸಾನ್ ಉದ್ಗಾರ್ಲೊ.

ಸ್ವಪಾಣ್. ಜಾಕೊಬಾನ್ ಎಸಾವಾ ಸಾಂಗಾತಾ ರಾಜಿ–ಸಂಧಾನ್ ಕರುನ್ ಕಾನಾನ್ ಗಾಂವಾಚಿ ವಾಟ್ ಧರ್ಲಿ. ಪಯ್ಣಾವೆಳಿಂ ರಾಕೆಲ್ ಜಾಕೊಬಾಚ್ಯಾ ದುಸ್ರ್ಯಾ ಭುರ್ಗ್ಯಾಕ್ ಪ್ರಸುತ್ ಜಾವ್ನ್ ಅಂತರ್ಲಿ. ಮರ್ಚ್ಯಾ ಪಯ್ಲೆಂ ಭುರ್ಗ್ಯಾಕ್ "ಬೆಜ್ಮಿ" ಮ್ಹಣ್ ನಾಂವ್ ದವರ್ಲೆಂ. ಅಶೆಂ ಜಾಕೊಬಾನ್ ತಿಕಾ ಬೆತ್ಲೆಮಾಂತ್ ಮಾತ್ಯೆಕ್ ಪಾಯ್ಲೆಂ. ಜಾಕೊಬ್ ರಾಕೆಲಾಚೊ ಮಸ್ತ್ ಮೋಗ್ ಕರ್ತಾಲೊ ಜಾಲ್ಲ್ಯಾನ್ ತೊ ಮಸ್ತ್ ದುಖೆಸ್ತ್ ಜಾಲೊ.

ಜಾಕೊಬ್ ಆಪ್ಲ್ಯಾ ಸರ್ವ್ ಭುರ್ಗ್ಯಾಂ ಪ್ರಾಸ್ ಜುಜೆಚೊ ಚಡ್ ಮೋಗ್ ಕರ್ತಾಲೊ. ತಾಚ್ಯಾ ಖಾತಿರ್ ಜಾಕೊಬಾನ್ ವಿಷೇಶ್ ವಸ್ತುರ್ ಶಿಂವಯಿಲ್ಲೆಂ. ಹೆಂ ಪಳೇವ್ನ್ ಉರಲ್ಲೆ ಭಾವ್ ಜುಜೆಚೇರ್ ಕೆದಾಳಾಯ್ ಜಳ್ತಾಲೆ. ಎಕ್ ದಿಸ್ ಜುಜೆನ್ ಆಪ್ಣಾಕ್ ಸ್ವಪಾಣ್ ಪಡಲ್ಲೆಂ ವಿವರ್ಸುನ್ ಸಾಂಗ್ಲೆಂ. ಮ್ಹಣ್ಜೆ ಉರಲ್ಲ್ಯಾ ಭಾವನಿಂ ಜುಜೆಕ್ ಸರ್ಪಡಿಜಾಯ್ ಮ್ಹಳ್ಳ್ಯಾ ಅರ್ಥಾಚೆಂ ಸ್ವಪಾಣ್ ತೆಂ ಜಾವ್ನಾಸಲ್ಲೆಂ. ಆಯ್ಕೊನ್ ಸಗ್ಳೆ ಭಾವ್ ಜುಜೆಚೇರ್ ಆನಿಕ್ ಇಲ್ಲೆ ಚಿಡ್ಲೆ ಆನಿಂ ದ್ವೆಶುಂಕ್ ಲಾಗ್ಲೆ ಆನಿಂ ತಾಕಾ ಲಾಗಾಡ್ ಕಾಡುಂಕ್ ವೇಳ್ ರಾಕ್ತಾಲೆ.

(ಬೆಜ್ಮಿ ವ ಬೆಂಜಮಿನ್ = ಉಜ್ವೊ ಹಾತ್).

## ಜುಜೆಚೊ ವಿಕ್ರೊ

ಜುಜೆಚೆ ಭಾವ್ ಆಪ್ಲೊ ಬಾಪಯ್ ಜಾಕೊಬಾಚೆ ಬಕ್ರ್ಯಾ ಹಿಂಡ್ ಶೆಕೆಮಾಕ್ ವ್ಹರುನ್ ಚರಯ್ತಾಲೆ. ಹೆಂ ಪಳೆಂವ್ಕ್ ಜಾಕೊಬಾನ್ ಜುಜೆಕ್ ಶೆಕೆಮಾಕ್ ಧಾಡುನ್ ದಿಲೆಂ. ಸೊಬಿತ್ತ್ ಮುಸ್ತಾಯ್ಕಿಚೆರ್ ಚಲ್ನ್ ಯೆಂವ್ಚ್ಯಾ ಜುಜೆಕ್ ಪಳಯಿಲ್ಲ್ಯಾ ಉರಲ್ಲ್ಯಾ ಭಾವಾನಿಂ "ಸ್ವಪಾಣ್ ಪಾರ್ಕಿ ಯೆತಾ ಪಳೆಯಾ ತಾಕಾ ಎಕಾ ಘೊಂಡಾಂತ್ ಉಡವ್ನ್ ರಾನ್ವಟ್ ಮನ್ಜಾತಿನ್ ಗ್ರಾಸಿಲೆಂ ಮ್ಹಣ್ ಘರಾ ಖಬರ್ ದಿಯಾಂ ಮ್ಹಣೊನ್ ಜುಜೆಕ್ ಜಿವ್ಶಿಂ ಮಾರ್ಚಿ ಆಲೋಚನ್ ಕರಿಲಾಗ್ಲೆ. ಹಾಂಚಿ ಯೆವ್ಜಣ್ ಆಯ್ಕೊನ್ ಮಾಲ್ಘಡ್ಯಾ ಭಾವಾ ರೂಬೆನಾಕ್ ಬೆಜಾರ್ ಜಾಲೆಂ ತಾಣೆಂ ಜುಜೆಕ್ ವಾಂಚಂವ್ಚ್ಯಾ ಖಾತಿರ್ **"ತಾಕಾ ಜಿವ್ಶಿಂ ಮಾರಿನಾಕಾತ್ ಘೊಂಡಾಂತ್ ಉಡಯಾ"** ಮ್ಹಣ್ ಭಾವಾಂಲಾಗಿಂ ವಿನತಿ ಕೆಲಿ.

ಜುಜೆ ಲಾಗಿಂ ಪಾವಲೊಚ್ಚ್ ಉರಲ್ಲ್ಯಾ ಭಾವಾನಿಂ ಜುಜೆಚೊ ಜುಬ್ಬೊ ಒಡ್ನ್ ಕಾಡ್ನ್ ತಾಕಾ ಘೊಂಡಾಂತ್ ಲೊಟ್ಲೊ. ತವಳ್ ತ್ಯಾ ವಾಟೆನ್ ಇಸ್ಲಾಯೆಲ್‌ಗಾರ್ (ಆಬ್ರಾಹಾಮಕ್ ತಾಚೆಂ ಚಾಕರ್ನ್ ಹಾಗರಾ ಥಾವ್ನ್ ಜಲ್ಮಲ್ಲ್ಯಾ ಪುತಾಚೆಂ ಸಂತಾನ್) ವ್ಯಾಪಾರಿಚೆಂ ಎಕ್ ತಂಡ್ ಎಜಿಪ್ತಾ ಕುಶಿನ್ ಪಾಶಾರ್ ಜಾತೆಲೆಂ. "ಜುಜೆಕ್ ಜಿವ್ಶಿಂ ಮಾರಲ್ಲ್ಯಾನ್ ಫಾಯ್ದೊ ಕಿತೆಂ ಮ್ಹಣ್ ಚಿಂತಲ್ಲ್ಯಾ ಭಾವಾನಿಂ ಜುಜೆಕ್ ತ್ಯಾ ವ್ಯಾಪರಿಸ್ತಾಂಕ್ ದುಡ್ವಾಕ್ ವಿಕ್ಲೊ. ಆನಿಂ ತಾಣಿಂ ಜುಜೆಕ್ ಎಜಿಪ್ತಾಕ್ ವ್ಹೆಲೊ.

ಜುಜೆಚ್ಯಾ ಭಾವಾನಿಂ ಜುಜೆಚೆಂ ವಸ್ತುರ್ ಬಕ್ರ್ಯಾಚ್ಯಾ ರಾಗ್ತಾಂತ್ ಭಿಜವ್ನ್ ಆಪ್ಲ್ಯಾ ಬಾಪಾಯ್ಕ್ ಜಾಕೊಬಾಕ್ ದಾಕಯ್ಲೆಂ. ಹೆಂ ಪಳೇವ್ನ್ ಆಪ್ಲ್ಯಾ ಪುತಾಕ್ ರಾನ್ ಮನ್ಜಾತಿನ್ ಫಾಪ್ಸಿಲಾಂ ಮ್ಹಣ್ ಚಿಂತುನ್ ಜಾಕೊಬಾ ಫಳ್ಫಳ್ಯಾಂ ರಡ್ಲೊ!

ಮುಂದುವರಿಯುವದು......

ಬರಯ್ಣಾರ್ : ಜೇಜುದಾಸ್
(ಡೇವಿಡ್ ಲುವಿಸ್ ತಲ್ಲುರ್).

ಯೆಹೋವನು ಕೃಪೆಯನ್ನು ಘನವನ್ನೂ ಅನುಗ್ರಹಿಸವನು; ಆತನು ಸದ್ಭಕ್ತರಿಗೆ ಯಾವ ಶುಭವನ್ನು ದಯಪಾಲಿಸದೆ ಇದ್ದಾನು ? (ಕೀರ್ತ. 84:11).

# ಜಾಹಿರಾತು

ನಿಮಗೆ ಶಾಲೆಯ ಯೂನಿಫಾರಂ ಮತ್ತು ದೇವರ ವಾಕ್ಯದ ಟಿ-ಶರ್ಟ್ ಬೇಕಾದಲ್ಲಿ ನಾವು ಮಾಡಿಕೊಡುತ್ತೇವೆ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941, 08202002781, 9844265602.**

## ಬೇಕಾಗಿದ್ದಾರೆ

ಒಂದು ಒಳ್ಳೆಯ ಕ್ರೈಸ್ತ ಸೇವಾ ಸಂಸ್ಥೆಗೆ Accountant ಬೇಕಾಗಿದ್ದಾರೆ

ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**0820–2002781, 9902334941.**

## ಬೇಕಾಗಿದ್ದಾರೆ

24 ಗಂಟೆ ಪ್ರಾರ್ಥನಾ ಗೋಪುರದಲ್ಲಿ ಪ್ರಾರ್ಥಿಸುವ ಪ್ರಾರ್ಥನಾ ವೀರರು ಬೇಕಾಗಿದ್ದಾರೆ. ಊಟ, ವಸತಿ ಸೌಕರ್ಯವನ್ನು ನೀಡಲಾಗುವುದು. ಪ್ರಾರ್ಥನೆ ಮಾಡಲು ಇಚ್ಛಿಸುವವರು

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941.**

ನೀವು ನಮ್ಮ ಅನಾಥಾಶ್ರಮದಲ್ಲಿ ಸೇವೆ ಮಾಡಲು ಇಷ್ಟಪಡುವುದಾದರೆ

ನಮ್ಮನ್ನು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941, 08202002781.**

ದೇವರು ನಮಗೆ ಆಶ್ರಯದುರ್ಗವಾಗಿದ್ದಾನೆ; ಆತನು ಇಕ್ಕಟ್ಟಿನಲ್ಲಿ ನಮಗೆ ವಿಶೇಷ ಸಹಾಯಕನು (ಕೀರ್ತ. 46:1).

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

# ಮಹಿಳೆಯರ ಸ್ವರ

1) ಮೊದಲನೆದಾಗಿ ಇದು ಚಾರಿತ್ರಿಕ ಪುಸ್ತಕವಾಗಿದೆ.
2) ಎರಡನೆಯದಾಗಿ ಇದು ಆತ್ಮೀಕ ಪುಸ್ತಕವಾಗಿದೆ.
3) 3ನೆಯದಾಗಿ ಇದು ಹಿಂಜಾರಿದವರಿಗೆ ನಿರೀಕ್ಷೆ ಕೊಡುವ ಪುಸ್ತಕವಾಗಿದೆ.
4) 4ನೇಯದಾಗಿ ಇದು ವಂಶಾವಳಿಯನ್ನು ಆಧರಿಸಿ ಬರೆದ ಪುಸ್ತಕವಾಗಿದೆ.
5) 5ನೇಯದಾಗಿ ದೇವರನ್ನು ನಂಬಿ ಬಂದವರು ಎಂದಿಗೂ ಕೈ ಬಿಡಲ್ಪಡುವುದಿಲ್ಲ ಎಂದು ತಿಳಿಸುವ ಪುಸ್ತಕವಾಗಿದೆ.
6) ಇದು ಪ್ರವಚಗಳಿಂದ ಕೂಡಿದ ಪುಸ್ತಕವಾಗಿದೆ.
7) ಇದು ಸಿದ್ಧಾಂತಗಳಿಂದ ಕೂಡಿದ ಪುಸ್ತಕವಾಗಿದೆ.
8) ಇದು ಬಿಡುಗಡೆಯ ಪುಸ್ತಕವಾಗಿದೆ.
9) 6ನೇಯದಾಗಿ ನಾವು ನಮ್ಮ ಜೀವಿತದಲ್ಲಿ ಕಳಕೊಂಡದ್ದನ್ನು ದೇವರು ತಿರುಗಿ ಕೊಡುವಾತನು ಎಂದು ತಿಳಿಸುವ ಪುಸ್ತಕವಾಗಿದೆ.
10) 7ನೇಯದಾಗಿ ಅತ್ತೆ ಸೊಸೆ ಹೇಗೆ ಸಮಾಧಾನ, ಸಂತೋಷ ಪ್ರೀತಿಯಿಂದ ಒಟ್ಟಾಗಿ ಜೀವಿಸಬಹುದು ಎಂದು ತಿಳಿಸುವ ಪುಸ್ತಕವಾಗಿದೆ.
11) ಸತ್ಯವೇದದಲ್ಲಿರುವ ವಂಶಾವಳಿಗಳಲ್ಲೆಲ್ಲಾ ಯೇಸುಕ್ರಿಸ್ತನ ವಂಶಾವಳಿಯೇ ಅತೀ ಪ್ರಾಮುಖ್ಯವಾದ ವಂಶಾವಳಿಯಾಗಿದೆ.
12) ಆದಿ. 38:29ರಲ್ಲಿ ಯೆಹೂದ ಕುಲದ ಆರಂಭವನ್ನು ಕುರಿತು ಬರೆಯಲ್ಪಟ್ಟಿರುತ್ತದೆ. ಆದರೆ ನಾವು ನೆನಪಿನಲ್ಲಿ ಇಟ್ಟುಕೊಳ್ಳಬೇಕಾದ ಇನ್ನೊಂದು ಮುಖ್ಯವಾದ ಸಂಗತಿಯು ಏನೆಂದರೆ ಯೆಹೂದದಿಂದ ದಾವೀದನ ಮಧ್ಯದಲ್ಲಿರುವ ವಂಶಾವಳಿಯು ರೂತಳ ಪುಸ್ತಕದಲ್ಲಿಯೂ ಬರೆದಿರುವುದಿಲ್ಲ. ಆದರೆ ರೂತಳ ಪುಸ್ತಕದಲ್ಲಿ ಮಾತ್ರ ದಾವೀದನು ಯೂದ ಗೋತ್ರದಿಂದ ಬಂದವನೆಂದು ತಿಳಿಸುತ್ತದೆ. ಆದಿ. 49:10 ರಾಜದಂಡವನ್ನು ಹಿಡಿಯತಕ್ಕವನು ಬರುವ ತನಕ ಆ ದಂಡವು ಯೆಹೂದನ ಕೈಯಿಂದ ತಪ್ಪುವುದಿಲ್ಲ. ಮುದ್ರೆ ಕೊಟ್ಟು ಅವನ ಪಾದಗಳ ಬಳಿಯಿಂದ ಕದಲುವುದಿಲ್ಲ. ಅವನಿಗೆ ಅನ್ಯಜನಗಳೂ ವಿಧೇಯರಾಗುವರು ಎಂದು ಬರೆಯಲ್ಪಟ್ಟಿದೆ. ರೂತಳ ಪುಸ್ತಕದಲ್ಲಿರುವ ಈ ವಂಶಾವಳಿಯು ಯೆಹೋವನಿಗೂ, ದಾವೀದನಿಗೂ ಇರುವ ಸಂಬಂಧವನ್ನು ತಿಳಿಸುತ್ತದೆ.

ನಮ್ಮ ಜೀವಿತದಲ್ಲಿ ಸೋಲುಗಳು, ನೋವುಗಳು ಬರುವಾಗ ದೇವರನ್ನು ಬಿಟ್ಟು ನಾವು ಹಿಂಜಾರಿ ಹೋಗಬಾರದು. ಹಿಂಜಾರಿ ಹೋದರೆ ಅನೇಕ ಸಮಸ್ಯೆಗಳಿಗೆ ಒಳಗಾಗುತ್ತೇವೆ ಹಾಗೂ ದೈವಾಶೀರ್ವಾದವನ್ನು ಕಳಕೊಳ್ಳುತ್ತೇವೆ ಎಂದು ಈ ಪುಸ್ತಕ ಸಂದೇಶಕೊಡುತ್ತದೆ ಮತ್ತು ಹಿಂಜಾರಿದವರು ಮಾನಸಾಂತರಪಟ್ಟು ತಿರುಗಿ ದೇವರ ಬಳಿ ಬರುವುದಾದರೆ ಪುನರ್‌ಸ್ಥಾಪನೆ, ಆಶೀರ್ವಾದಗಳನ್ನು ಹೊಂದಬಹುದೆಂದು ಈ ಪುಸ್ತಕವು ಸಂದೇಶಕೊಡುತ್ತದೆ.

ನ್ಯಾಯಸ್ಥಾಪಕರು ಆಳುತ್ತಿದ್ದ ಕಾಲದಲ್ಲಿ ಕಾನಾನ್ ದೇಶದ ಮೇಲೆಲ್ಲಾ ಬರ ಬಂದ ಕಾರಣ ಯೆಹೂದ ಪ್ರಾಂತಕ್ಕೆ ಸೇರಿದವನಾದ ಬೆತ್ಲೆಹೇಮಿನವನಾದ ಎಲಿಮಲೇಕನು ಮೋವಾಬಿನಲ್ಲಿ ವಾಸಮಾಡಬೇಕೆಂದು ಬಯಸಿ ತನ್ನ ಹೆಂಡತಿ ಹಾಗೂ ಇಬ್ಬರೂ ಗಂಡು ಮಕ್ಕಳೊಂದಿಗೆ ಹೊರಟು ಹೋದನು. ಅದರ ನಂತರ ಅವರ ಜೀವಿತದಲ್ಲಿ ಏನೆಲ್ಲಾ ಸಂಭವಿಸಿತು ನಾವು ನೋಡೋಣ.

ಕಾನಾನ್ ದೇಶವು ಇಸ್ರಾಯೇಲ್ ಜನರಿಗೆ ದೇವರಿಂದ ವಾಗ್ದಾತ್ತವಾಗಿ ಕೊಡಲ್ಪಟ್ಟ ದೇಶವಾಗಿತ್ತು. ಅದು ಹಾಲು ಜೇನು ಹರಿಯುವಂತ ದೇವರಿಂದ ಸಕಲ ಆಶೀರ್ವಾದಗಳು ವಾಗ್ದಾನವಾಗಿ ಹೇಳಲ್ಪಟ್ಟಿತ್ತು. ಬರಗಾಲವಾಗಲಿ, ರೋಗವಾಗಲಿ, ವೈರಿಗಳ ಭಯ ಆಗಲಿ ಇಲ್ಲದೆ ಸಮೃದ್ಧಿಯ ಆಶೀರ್ವಾದದ ಜೀವಿತವು ಅವರಿಗೆ ಕಾನಾನಿನಲ್ಲಿ ಕೊಡಲ್ಪಟ್ಟಿತು. ಹಾಗಾದರೆ ಕಾನಾನಿನಲ್ಲಿ ಬರ ಬಂದದ್ದಕ್ಕೆ ಕಾರಣಗಳೇನು?

ಈ ಪುಸ್ತಕದ 1–1ರಲ್ಲಿ ನ್ಯಾಯಸ್ಥಾಪಕರು ಆಳುತ್ತಿದ್ದ ಕಾಲದಲ್ಲಿ ಕಾನಾನ್ ದೇಶದ ಮೇಲೆ ಬರ ಬಂದುದರ ಕುರಿತು ತಿಳಿಸುತ್ತದೆ. ಈ ಬರ ಬಂದಿರುವುದಕ್ಕೆ ಕಾರಣವೇನೆಂದರೆ ತನ್ನನ್ನು ಪರೋಹನ ದಾಸತ್ವದಿಂದ ಹಾಲು ಜೇನು ಹರಿಯುವ ಕಾನಾನ್‌ದೇಶಕ್ಕೆ ಕರೆದುಕೊಂಡು ಬಂದ ಕೃಪಾಭರಿತನೂ, ಸರ್ವಶಕ್ತನೂ ಅದ ಜೀವಸ್ವರೂಪನಾದ ದೇವರನ್ನು ಬಿಟ್ಟು ಅನ್ಯ ದೇವರುಗಳಿಗೆ ಅಡ್ಡಬಿದ್ದು ಆರಾಧಿಸಿ ಪಾಪ ಮಾಡಿದ್ದರಿಂದ ದೇವರ ದೃಷ್ಟಿಯಲ್ಲಿ ದ್ರೋಹಿಗಳಾದರು. ಆದಕಾರಣ ದೇವರು ಕೋಪಗೊಂಡು ಆ ದೇಶದ ಮೇಲೆಲ್ಲಾ ಘೋರವಾದ ಬರ ಬರುವಂತೆ ಮಾಡಿದನು. ಇಸ್ರಾಯೇಲ್ಯರು ತನ್ನನ್ನು ಮರೆತು ಅನ್ಯದೇವರುಗಳಿಗೆ ಅಡ್ಡಬಿದ್ದಾಗಲೆಲ್ಲಾ ದೇವರು ಅವರಿಗೆ ಕೊಡುವ ಶಿಕ್ಷೆಯಲ್ಲಿ ಬರವು ಕೂಡ ಒಂದಾಗಿತ್ತು ಎಂದು ಸತ್ಯವೇದದಲ್ಲಿ ಅನೇಕ ಕಡೆ ಓದಿ ತಿಳಿದುಕೊಳ್ಳಬಹುದು (ಆದಿ. 26:1–2, 42:5, 47:1–15, ಯೆರೆ. 16:1–13, ಯೆಹೆ. 5:11–

ಅದ್ಭುತಗಳನ್ನು ನಡಿಸುವ ದೇವರು ನೀನೇ; ಜನಾಂಗಗಳಲ್ಲಿ ಪರಾಕ್ರಮವನ್ನು ತೋರ್ಪಡಿಸಿದಿ (ಕೀರ್ತ. 77:14).

18, ಧರ್ಮೋ. 28:15, 23, 24, 2 ಅರ. 8:1). ಇಸ್ರಾಯೇಲರು ದೇವರಾದುಕೊಂಡ ಆತನ ಸ್ವಕೀಯ ಪ್ರಜೆಗಳಾಗಿದ್ದರೂ ದಾರಿತಪ್ಪಿ ದೇವರ ದೃಷ್ಟಿಯಲ್ಲಿ ದ್ರೋಹಿಗಳಾದಾಗಲೆಲ್ಲಾ ದೇವರು ಅವರ ವೈರಿಗಳ ಮೂಲಕವಾಗಲಿ, ಬರದ ಮೂಲಕವಾಗಲಿ, ರೋಗಗಳ ಮೂಲಕವಾಗಲಿ ಅವರನ್ನು ಶಿಕ್ಷಿಸಿ, ಬಾಧಿಸುತ್ತಾ ಬರುವುದನ್ನು ದೇವರ ವಾಕ್ಯದ ಮೂಲಕ ತಿಳಿದುಕೊಳ್ಳಬಹುದು. ಅಬ್ರಹಾಮನ ಕಾಲದಲ್ಲಿಯೂ ದೇವರು ಅವನಿಗೆ ವಾಗ್ದತ್ತವಾಗಿ ಕೊಟ್ಟ ದೇಶದಲ್ಲಿಯೇ ಬರ ಬಂದದ್ದನ್ನು ಕಾಣಬಹುದು. ಈ ಕಷ್ಟದಿಂದ ತಪ್ಪಿಸಿಕೊಳ್ಳಲು ದೇವರು ಅಬ್ರಹಾಮನನ್ನು ಐಗುಪ್ತಕ್ಕೆ ಕಳುಹಿಸಿಲಿಲ್ಲ. ಆದರೆ ಅಬ್ರಹಾಮನು ತಾನೇ ಆ ದೇಶದಲ್ಲಿ ಬಂದ ಕ್ಷಾಮದಿಂದ ತಪ್ಪಿಸಿಕೊಳ್ಳುವುದಕ್ಕೆ ತಾನು ಮಾತ್ರವಲ್ಲ ತನ್ನ ಪರಿವಾರ ಸಮೇತ ಐಗುಪ್ತಕ್ಕೆ ಹೊರಟು ಹೋದನು.

ಕೃಪೆಯುಳ್ಳ ಕರ್ತನು ತಾನೇ ನಿಮ್ಮನ್ನು ಆಶೀರ್ವದಿಸಲಿ.

ಮುಂದುವರಿಯುವದು........

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ,

**– ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

# ನಂಬಿಕೆಯ ಪ್ರತಿಫಲ

ಕರ್ತನಾದ ಯೇಸುಕ್ರಿಸ್ತನ ಸುಮಧುರವಾದ ನಾಮದಲ್ಲಿ ನಿಮಗೆ ವಂದನೆಗಳು

**"ನಂಬಿಕೆಯೋ ನಾವು ನಿರೀಕ್ಷಿಸುವವುಗಳ ವಿಷಯವಾಗಿ ಭರವಸದಿಂದಿರುವದೂ ಕಣ್ಣಿಗೆ ಕಾಣದವುಗಳನ್ನು ನಿಜವೆಂದು ತಿಳುಕೊಳ್ಳುವದೂ ಆಗಿದೆ"** (ಇಬ್ರಿ. 11:1).

ಕರ್ತನಲ್ಲಿ ಪ್ರಿಯರೇ, 'ನಂಬಿಕೆಯು ಸಮಸ್ಯೆಯನ್ನು ನೋಡಿ ನಗುತ್ತದೆ, ಅಪನಂಬಿಕೆಯು ಸಂಗತಿಗಳನ್ನು ನೋಡಿ ಸಂಶಯಪಡುತ್ತದೆ'. ಅನೇಕ ವರ್ಷಗಳ ಹಿಂದೆ ನ್ಯೂಫೌಂಡ್ ಲ್ಯಾಂಡಿನಿಂದ ಒಂದು ಪ್ರಯಾಣಿಕರ ಹಡಗು ಕ್ಯೂಬಾಕಿಗೆ ಹೊರಟಿತು. ಜಾರ್ಜ್‌ಮುಳ್ಳರ್ ಇದ್ದ ಆ ಹಡಗಿನಲ್ಲಿ, ಬಹಳ ಮಂಜಿನ ಕಾರಣದಿಂದ ಹಡಗು ಮುಂದೆ ಸಾಗಲು ಸಾಧ್ಯವಿಲ್ಲದ ಸ್ಥಿತಿಯಾಯಿತು. ನಾವಿಕನು 24 ಗಂಟೆಗಳ ಕಾಲ ಹಡಗಿನ ಮೇಲ್ಭಾಗದಲ್ಲೇ ಉಳಿದನು. ಜಾರ್ಜ್ ಮುಳ್ಳರ್ ನಾವಿಕನ ಬಳಿಗೆ ಹೋಗಿ ಈ ರೀತಿ ಹೇಳಿದನು. **"ಕ್ಯಾಪ್ಟನ್ ನನಗೆ ಶನಿವಾರ ಮಧ್ಯಾಹ್ನ ಕ್ಯೂಬಾಕಿಗೆ ತಲುಪಬೇಕು"**. ಅದು ಸಾಧ್ಯವೇ ಇಲ್ಲ ಎಂದು ಕಪ್ತಾನ ದೃಢವಾಗಿ ಹೇಳಿದನು. **"ಸರಿ, ನಿಮ್ಮ ಹಡಗಿಗೆ ಅದು ಅಸಾಧ್ಯವಾದರೆ ದೇವರಿಗೆ ಬೇರೆ ಮಾರ್ಗವಿರುತ್ತದೆ. ಕಳೆದ 57 ವರ್ಷಗಳಲ್ಲಿ ನನ್ನ ಯಾವ ಪದ್ಧತಿಗಳು ಸೋತು ಹೋಗಿಲ್ಲ. ನಾವು ಕೆಳಗಿನ ಕೋಣೆಗೆ ಹೋಗಿ ಪ್ರಾರ್ಥನೆ ಮಾಡೋಣ"**.

ದೇವರ ಮೇಲೆ ನಂಬಿಕೆಯಿದ್ದ ಮುಳ್ಳರನನ್ನು ಕ್ಯಾಪ್ಟನ್ ದೃಷ್ಟಿಸಿ ನೋಡಿದನು. ಯಾವ ಹುಚ್ಚಾಸ್ಪತ್ರೆಯಿಂದ ಈ ಮನುಷ್ಯನು ಬಂದಿದ್ದಾನೆ? ಪ್ರಜ್ಞೆ ಇರುವ ಯಾರಾದರೂ ಈ ರೀತಿ ಹೇಳುತ್ತಾರೋ? ಕ್ಯಾಪ್ಟನ್‌ನ ಮನಸ್ಸಿನಲ್ಲಿ ಈ ರೀತಿಯ ಆಲೋಚನೆಗಳು ಬಂದವು. ಆದರೂ ಅವರು ಮುಳ್ಳರ್‌ರೊಂದಿಗೆ ಕೆಳಗಿನ ಕೋಣೆಗೆ ಹೋದರು. ಕ್ಯಾಪ್ಟನ್ ಕೇಳಿದರು, **"ದುರ್ಗಮವಾದ ಈ ಮುಚ್ಚಿಕೊಂಡಿರುವ ಹಿಮವನ್ನು ನೀವು ಕಾಣುತ್ತಿಲ್ಲವೋ"** "ಇಲ್ಲ, ನನ್ನ ಸುತ್ತಮುತ್ತಲಿನ ಕಾರ್ಯಗಳನ್ನಲ್ಲ, ಎಲ್ಲಾ ಸನ್ನಿವೇಶಗಳನ್ನು ನಿಯಂತ್ರಿಸುವ ಜೀವಸ್ವರೂಪನಾದ ದೇವರನ್ನೇ ನನ್ನ ಕಣ್ಣುಗಳು ನೋಡುತ್ತಿವೆ. ನಂತರ ಅವರು ಮೊಣಕಾಲೂರಿ ಬಹಳ ಸರಳವಾದ ರೀತಿಯಲ್ಲಿ ಪ್ರಾರ್ಥನೆ ಮಾಡಿದರು. ಅವರು ಪ್ರಾರ್ಥನೆ ಮುಗಿಸಿದಾಗ ಕ್ಯಾಪ್ಟನ್ ಸಹ ಪ್ರಾರ್ಥನೆ ಮಾಡಲು ಬಯಸಿದನು. ಆದರೆ ಜಾರ್ಜ್ ಮುಳ್ಳರ್ ಪ್ರೀತಿಯಿಂದ ಕ್ಯಾಪ್ಟನ್‌ನ ತೋಳಿನಲ್ಲಿ ಕೈಹಾಕಿ ಹೇಳಿದರು. 'ಬೇಡ ಕ್ಯಾಪ್ಟನ್, ನೀವು ಪ್ರಾರ್ಥನೆ ಮಾಡಬೇಕಾದ ಅವಶ್ಯವಿಲ್ಲ. ಮೊದಲನೆದಾಗಿ ನೀವು ನಂಬುತ್ತಿಲ್ಲ, ಎರಡನೆಯದಾಗಿ ದೇವರು ನನ್ನ ಪ್ರಾರ್ಥನೆಗೆ ಉತ್ತರ ಕೊಟ್ಟಿದ್ದಾನೆಂದು ನಾನು ನಂಬಿದ್ದೇನೆ. ಆದುದರಿಂದ ಈ ವಿಷಯಕ್ಕಾಗಿ ಪ್ರಾರ್ಥನೆ ಮಾಡಬೇಕಾದ ಅವಶ್ಯವಿಲ್ಲ, ಎದ್ದು ಬಾಗಿಲನ್ನು ತೆರೆಯಿರಿ. ಈಗ ಹಿಮ ದೂರ ಸರಿದಿರುವದನ್ನು ನೀವು ನೋಡುತ್ತೀರಿ?.

ಕ್ಯಾಪ್ಟನ್ ಎದ್ದು ಬಾಗಿಲು ತೆರೆದರು. ಅದ್ಭುತವೆಂದಲ್ಲದೆ ಬೇರೆ ಏನು ಹೇಳುವದು. ಮುಳ್ಳರ್ ಹೇಳಿದ ಹಾಗೆ ಹಿಮ ದೂರ ಸರಿದಿದೆ. ಹಡಗು ಸರಿಯಾದ ಸಮಯಕ್ಕೆ ಕ್ಯೂಬಾಕಿಗೆ ತಲುಪಿತು. ಈ ನಡೆದ ಘಟನೆಯಲ್ಲಿರುವ ಹಾಗೆ ನಂಬಿಕೆಯ ವೀರರು ಇಂದು ಕಡಿಮೆಯಾಗಿದ್ದಾರೆ. ಅನೇಕ ಸಂದರ್ಭಗಳಲ್ಲಿ ನಾವೂ ಈ ಕ್ಯಾಪ್ಟನ್‌ನ ಹಾಗೆ ಜೀವಿತದ ಸಮಸ್ಯೆಗಳಲ್ಲಿ ಸಿಲುಕಿಕೊಳ್ಳುತ್ತೇವೆ. ನಾವು ನಂಬಿಕೆಯುಳ್ಳವರಾಗಿರಲು ದೇವರು ನಮ್ಮ ಕುರಿತು ಬಯಸುತ್ತಾನೆ.

ಸತ್ಯವೇದದಲ್ಲಿ ನೋಡುವ ಪ್ರಕಾರ ದೂರದಲ್ಲಿದ್ದ ಶತಾಧಿಪತಿಯು ತನ್ನ ಆಳನ್ನು ಗುಣಮಾಡಲು ಯೇಸು ಶಕ್ತನೆಂದು ನಂಬಿದನು. ಒಬ್ಬ ಸರಕಾರದ ಉದ್ಯೋಗಸ್ಥನಾದ ಶತಾಧಿಪತಿಗೆ ಅಧಿಕಾರದ ಕುರಿತು, ಜವಾಬ್ದಾರಿಯ ಕುರಿತು, ಒಳ್ಳೆಯ ಮನವರಿಕೆಯಿದೆ. ಆದರೆ ಯೇಸುವಿನ ಅಧಿಕಾರ ತನ್ನ

ಯೆಹೋವನ ಆಲೋಚನೆಯೋ ಶಾಶ್ವತವಾಗಿಯೇ ನಿಲ್ಲುವದು

(ಕೀರ್ತ. 33:11).

ಅಧಿಕಾರಕ್ಕಿಂತ ದೊಡ್ಡದಾಗಿದೆ ಎಂದು ಶತಾಧಿಪತಿಯು ಹೇಳುತ್ತಿದ್ದಾನೆ, ಯೇಸುವನ್ನು ರೋಗದ ಮೇಲೆ ಅಧಿಕಾರವುಳ್ಳವನಾಗಿ ಕಾಣಲು ಆತನಿಗೆ ಸಾಧ್ಯವಾಯಿತು. ಈ ರೀತಿಯ ದೃಢವಾದ ನಂಬಿಕೆಗೆ ಪ್ರತಿಫಲ ನಿಶ್ಚಯವಾಗಿದೆ. ಶತಾಧಿಪತಿಯ ಕಡೆಯಿಂದ ಬಂದವರು ತಿರುಗಿ ಮನೆಗೆ ಹೋಗಿ ಆಳು ಆರೋಗ್ಯವಾಗಿರುವುದನ್ನು ಕಂಡರು. ಯೇಸು ಶತಾಧಿಪತಿಯ ನಂಬಿಕೆಯ ಕುರಿತು ಈ ರೀತಿ ಸಾಕ್ಷಿ ಹೇಳಿದನು. **"ನಾನು ಇಂಥ ದೊಡ್ಡ ನಂಬಿಕೆಯನ್ನು ಇಸ್ರಾಯೇಲ್ ಜನರಲ್ಲಿಯೂ ಕಾಣಲಿಲ್ಲ".**

ಪ್ರಿಯರೇ, ಇವತ್ತು ತನ್ನ ನಂಬಿಕೆ ಹೇಗೆ ಇದೆ. ಇವತ್ತು ಸಮಸ್ಯೆ, ಹೋರಾಟ, ರೋಗದ ಮುಂದೆ ತತ್ತರಿಸಿ ಹೋಗುತ್ತಿದ್ದಿಯೋ ಅವತ್ತು ಯೇಸು ಹಿಂಬಾಲಿಸಿದ ಶಿಷ್ಯರನ್ನು ನೋಡಿ ಎಷ್ಟು ಸಾರಿ ಯೇಸು ತನ್ನ ಶಿಷ್ಯರನ್ನು ಅಲ್ಪವಿಶ್ವಾಸಿಗಳೇ, ಎಂದು ಗದರಿಸಿದನು. ಯೇಸು ಅವರ ಮುಂದೆ ಎಷ್ಟು ಅದ್ಭುತಗಳನ್ನು ಮಾಡಿದನು. ಅದರು ಸನ್ನಿವೇಶಗಳು, ಹೋರಾಟಗಳು ಪ್ರತಿಕೂಲವಾಗಿ ಬಂದಾಗ ಅವರ ಸಂಗಡನೇ ಇದ್ದ ಯೇಸುವನ್ನು ಮರೆತರು. ಇದರ ನಿಮಿತ್ತವಾಗಿ ಭಯಗ್ರಸ್ಥರಾದರು, ಸಂದೇಹಪಟ್ಟರು, ಕೆಲವೊಂದು ಕಾರ್ಯವನ್ನು ಅವರಿಂದ ಮಾಡಲಿಕ್ಕೆ ಆಗಲಿಲ್ಲ. ಕಾರಣ ಶಿಷ್ಯರ ನಂಬಿಕೆ ಕಡಿಮೆಯಾಗಿತ್ತು.

**"ಯೇಸು ಅವರಿಗೆ ನಿಮ್ಮ ನಂಬಿಕೆ ಕಡಿಮೆಯಾಗಿರುವದರಿಂದಲೇ ಆಗಲಿಲ್ಲ; ನಿಮಗೆ ಸತ್ಯವಾಗಿ ಹೇಳುತ್ತೇನೆ, ಸಾಸಿವೇ ಕಾಳಷ್ಟು ನಂಬಿಕೆ ನಿಮಗೆ ಇರುವದಾದರೆ ನೀವು ಈ ಬೆಟ್ಟಕ್ಕೆ ಇಲ್ಲಿಂದ ಅಲ್ಲಿಗೆ ಹೋಗು ಎಂದು ಹೇಳಿದರೂ ಅದು ಹೋಗುವದು; ಮತ್ತು ನಿಮ್ಮ ಕೈಯಿಂದಾಗದಂಥದು ಒಂದೂ ಇರುವದಿಲ್ಲ ಅಂದನು"** (ಮತ್ತಾ. 17:20).

ಪ್ರಿಯರೇ, ಇವತ್ತು ನಿಮ್ಮ ಮುಂದೆ ಕ್ಯಾನ್ಸರ್ ಇನ್ನ್ಯಾವುದೋ ರೋಗ ನಿಮ್ಮನ್ನು ಕಾಡುತ್ತಿರಬಹುದು. ನಾನು ಕ್ರಿಸ್ತನನ್ನು ಸೇವಿಸುತ್ತಿದ್ದೇನೋ ಯಾಕೆ ಈ ಹೋರಾಟ ಅಥವಾ ಒಂದರ ನಂತರ ಒಂದಾಗೆ ಬರುವ ಬಿರುಗಾಳಿಯಂಥ ಹೋರಾಟ ನಿಮ್ಮ ದೋಣಿಯನ್ನು ಮುಳುಗಿಸುವಷ್ಟರ ಮಟ್ಟಿಗೆ ಅಲೆಗಳು ಎದ್ದು ಈಗಾಗಲೇ ಅಲೆಯ ನೀರು ನಿಮ್ಮ ದೋಣಿಗೆ ಹತ್ತಿರಬಹುದು. ಇನ್ನೇನು ಮುಗಿಯಿತು ಅಂಥಾ ನೀವು ಅಂದುಕೊಂಡಿರಬಹುದು. ಪ್ರೀಯರೇ, ನಿನ್ನ ಅಸಹಾಯಕತೆಯಲ್ಲಿ ನಿನ್ನ ಸಹಾಯಕನಾಗಿ ಯೇಸು ಇದ್ದಾನೆ. ಭಾರಪಡಬೇಡ.

ಶಿಷ್ಯರೆಲ್ಲಾ ದೋಣಿಯಲ್ಲಿ ತನ್ನ ಪ್ರಯಾಣ ಬೆಳೆಸಿದರು. ಅದೆಲ್ಲಾ ನಮಗೆ ಗೊತ್ತಿರುವ ವಿಷಯ ನೀವು ಈಗಾಗಲೇ ಕ್ರಿಸ್ತನಲ್ಲಿ ಪ್ರಯಾಣ ಬೆಳೆಸಿದಿರಿ. ಹೌದು ಇದು ನಂಬತಕ್ಕ ವಿಷಯವಾಗಿದೆ. ಪ್ರಯಾಣ ಬೆಳೆಸುವುದಕ್ಕಿಂತ ಮುಂಚಿತವಾಗಿಯೇ ಯೇಸು ನಿನ್ನ ದೋಣಿಯ ಹಿಂಬಾಗದಲ್ಲಿ ಮಲಗಿದ್ದಾನೆ. ಇದರ ರಹಸ್ಯ ಏನು ಗೊತ್ತಾ? ದೋಣಿಯ ಮುಂಭಾಗ ಯಾವಾಗಲೂ ಗಟ್ಟಿ ಇರುತ್ತದೆ. ಯಾವುದೇ ಕಲ್ಲಿಗೆ, ಮಂಜಿಗೆ ತಾಗಿದರೂ ಕೂಡಾ ಅದು ಅಷ್ಟು ಸುಲಭವಾಗಿ ಮುರಿಯಲ್ಪಡುವುದಿಲ್ಲ. ಆದರೆ ದೋಣಿಯ ಹಿಂಭಾಗ ಎತ್ತರವಾಗಿದ್ದರೂ ಅದು ಬಹಳ ಮೆದುವಾದ ಭಾಗ ಯೇಸುವಿಗೆ ಮೊದಲೇ ಗೊತ್ತಿತ್ತು. ಅದಕ್ಕೆ ಆ ಮುರಿಯಲ್ಪಟ್ಟ ಬಲಹೀನ ಭಾಗದಲ್ಲಿ ಯೇಸು ತಲೆದಿಂಬನ್ನು ಇಟ್ಟು ಮಲಗಿದನು. ದೇವರಿಗೆ ಚೆನ್ನಾಗಿ ಗೊತ್ತಿತ್ತು. ಬಿರುಗಾಳಿ ಬರುತ್ತದೆ, ಅಲೆ ಏಳುತ್ತದೆ ದೋಣಿಯೊಳಗೆ ನೀರು ಬರುತ್ತದೆ ಚೆನ್ನಾಗಿ ಗೊತ್ತಿತ್ತು. ಅದಕ್ಕಾಗಿ ದೋಣಿ ಮುಳುಗಿ ಹೋಗಬಾರದು ಎಂದು ಬಲಹೀನವಾದ ಭಾಗದಲ್ಲಿ ಆತನು ಮಲಗಿದನು.

ಪ್ರಿಯರೇ, ಈ ಹೋರಾಟ ಕಷ್ಟ, ಕಣ್ಣೀರು, ವೇದನೆ, ಈ ರೋಗ, ಯಾಕೆ? ಎಂದು ಗೋಳಾಡುತ್ತಿರಬಹುದು. ಅವರು ಒಂದು ಕಡೆಯಲ್ಲಿ ನೀರನ್ನು ಚೆಲ್ಲುವುದಕ್ಕೆ ಪ್ರಯತ್ನಮಾಡುತ್ತಿದ್ದಾರೆ. ಹೌದು ಇದುವರೆಗೆ ನೀನು ಸ್ವಪ್ರಯತ್ನ ಮಾಡಿರಬಹುದು, ಅನೇಕರು ನಿನ್ನನ್ನು ನೋಡಿ ಅಪಹಾಸ್ಯ ಮಾಡಿರಬಹುದು, ಕೇವಲವಾಗಿ ಮಾತಾಡಿರಬಹುದು, ನಿನ್ನ ಬಲಹೀನ ಭಾಗದಲ್ಲಿ ಮಲಗಿದ ಯೇಸುವಿಗೆ ಉತ್ತರಿಸಲಿಕ್ಕೆ ಒಂದು ಸಮಯ ಇದೆ. ಪ್ರಿಯನೇ, ಇದುವರೆಗೆ ಪ್ರಯಾಣ ಬೆಳೆಸಿದೆ. ಅನೇಕ ಸಂಗತಿಗಳನ್ನು ನೀನು ದಾಟಿ ಬಂದಿರಬಹುದು. ಆದರೂ ಕೂಡಾ ಹೋರಾಟದಿಂದ ತತ್ತರಿಸಿ ಹೋಗಿ ಭಾರಪಡುತ್ತಿರಬಹುದು, ಇದನ್ನು ಅರಿತ ಕರ್ತನು ಮುಂಚಿತವಾಗಿಯೇ ನಿನ್ನನ್ನು ನಿನ್ನೊಂದಿಗಿರುವವರನ್ನು, ನಿನ್ನ ದೋಣಿಯನ್ನು (ಸಭೆ, ಕುಟುಂಬ, ವ್ಯಾಪಾರ) ತಿಳಿದಿದ್ದಾನೆ.

ನಿನಗೆ ಎದುರಾಗಿ ಬರುವ ಬಿರುಗಾಳಿ ಮತ್ತು ಅಲೆಯ ಮುಂದೆ ನನ್ನ ಕರ್ತನು ಉತ್ತರಿಸುತ್ತಾನೆ. ಲೋಕವು ನಿನ್ನನ್ನು ಬಲಹೀನನಾಗಿ ಕಾಣಬಹುದು. ನನ್ನನ್ನು, ನಿನ್ನನ್ನು, ಅರಿತ ಕರ್ತನು ನಿನ್ನನ್ನು ಶಕ್ತನಾಗಿ ಕಾಣುತ್ತಾನೆ. ಮೋಶೆಯು ಹೇಳಿದನು, ನಾನು ಪರೋಹನ ಮುಂದೆ ನಿಲ್ಲಲು ಸಾಧ್ಯವಿಲ್ಲ. ನಾನು ತೊದಲು ಮಾತಿನವನು, ಪೇತ್ರನು ನೀರಿನಲ್ಲಿ ನಡೆಯಲು ಭಯಪಟ್ಟನು; ಬಲಹೀನನಾದ ಮೋಶೆ, ಅಂಜುಬುರುಕನಾದ ಪೇತ್ರನನ್ನು ದೇವರು ತನ್ನ ನಾಮದ ಮಹಿಮೆಗಾಗಿ ಉಪಯೋಗಿಸಿದನು.

ಲೋಕವು ನಿಮ್ಮನ್ನು ಕೇವಲವಾಗಿ ಕಾಣುವಾಗ ಕರೆದಂಥ ಕರ್ತನು ನಿಮ್ಮನ್ನು ನೆಲಕ್ಕೆ ಬೀಳಲು ಬಿಡುವುದಿಲ್ಲ. ನಿನ್ನ ದೋಣಿಯನ್ನು ಮುಳುಗಲಿಕ್ಕೆ ನನ್ನ ಕರ್ತನು ಬಿಡುವುದಿಲ್ಲ, ಆರಂಭದಲ್ಲಿ ಅಂತ್ಯವನ್ನು ಅರುಹಿದ ದೇವರು ನಿನ್ನನ್ನು ಸುರಕ್ಷಿತವಾಗಿ ನಡೆಸುತ್ತಾನೆ.

ಮುಂದುವರಿಯುವುದು......

ಉನ್ನತಲೋಕದಿಂದ ದಿವ್ಯಾತ್ಮಧಾರೆಯು ನಮ್ಮ ಮೇಲೆ ಸುರಿಸಲ್ಪಡುವದು. ಆಗ ಅರಣ್ಯವು ತೋಟವಾಗುವದು (ಯೆಶಾ. 32:15).

## ಈ ವಾಕ್ಯಗಳು ಎಲ್ಲಿವೆ?

ಮಕ್ಕಳ ಸ್ವರ

1. ಭೂಮ್ಯಾಕಾಶಗಳೂ ಅವುಗಳಲ್ಲಿರುವ ಸಮಸ್ತವೂ ನಿರ್ಮಿತವಾದವು.
2. ಯೆಹೋವನಿಗೆ ಕೃತಜ್ಞತಾಸ್ತುತಿಮಾಡಿರಿ; ಆತನು ಒಳ್ಳೆಯವನು.
3. ನೀವು ಭೂಮಿಗೆ ಉಪ್ಪಾಗಿದ್ದೀರಿ.
4. ದೋಷಿಯ ದಾರಿ ಡೊಂಕು.
5. ನೀವು ನನ್ನನ್ನು ಅರಿತಿದ್ದರೆ ನನ್ನ ತಂದೆಯನ್ನು ಅರಿಯುತ್ತಿದ್ದೀರಿ.
6. ನನ್ನ ಆಲಯವು ಎಲ್ಲಾ ಜನಾಂಗಗಳಿಗೂ ಪ್ರಾರ್ಥನಾಲಯವೆನಿಸಿಕೊಳ್ಳುವುದು.
7. ನನ್ನ ತಂದೆಯು ಎಲ್ಲವನ್ನು ನನಗೆ ಒಪ್ಪಿಸಿದ್ದಾನೆ.
8. ಯೌವನದಲ್ಲಿ ನೊಗ ಹೊರುವುದು ಮನುಷ್ಯನಿಗೆ ಲೇಸು.
9. ಸಬ್ಬತ್‌ದಿನದಲ್ಲಿ ಕೆಲಸವೇನಾದರೂ ಮಾಡುವವನಿಗೆ ಮರಣಶಿಕ್ಷೆಯಾಗಬೇಕು.
10. ಯೆಹೋವನು ನನಗೆ ಕುರುಬನು; ಕೊರತೆಪಡೆನು.

---

## ಮಾರ್ಚ್ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಉತ್ತರಗಳು :

1. ಇತ್ರೋನನು (ವಿಮೋ. 3:1).
2. ಯೆಹೋವ ಯೀರೆ (ಆದಿ. 22:14).
3. ಬೆಳನು (1 ಪೂರ್ವ. 8:1).
4. ಬಿಗೆತಾನ್, ತೆರೆಷ್ (ಎಸ್ತೇ. 6:2).
5. ತೆರೆಯಲಿ (ಮಾರ್ಕ. 7:34).
6. ತಿಮಾಯನ ಮಗನಾದ ಬಾರ್ತಿಮಾಯನು (ಮಾರ್ಕ. 10:46).
7. ಬೇಥಾನ್ಯದಲ್ಲಿ (ಮಾರ್ಕ. 14:4).
8. ಕೂಜನು
9. ಬೇತ್ಸಥಾ ಅಥವಾ ಬೇಥಸ್ದ (ಯೋಹಾ. 5:2–3).

---

## *ಸಾಮಾನ್ಯ ಜ್ಞಾನಕೋಶದ ರಸ ಪ್ರಶ್ನೋತ್ತರಗಳು :*

1. ಜಿಮ್ ಡಾಲಿ ಐರಿಷ್‌ಮನ್
2. ಹನ್ನೆರಡನೆಯ
3. 27.07.2002
4. ಪ್ರತಿಭಾ ಪಾಟೀಲ್
5. 25.07.2002
6. ಅವುಲ್ ಫಕೀರ್ ಜೈನೂಲ್ಲಾಬ್ದೀನ್ ಅಬ್ದುಲ್ ಕಲಾಂ
7. ಕಪಿಲ್‌ದೇವ್
8. ಕರ್ಣಂ ಮಲ್ಲೇಶ್ವರಿ
9. ಕೆ.ಸಿ. ರೆಡ್ಡಿ.
10. ಸಿಲಿಕಾನ್ ಕಣಿವೆ
11. 2792
12. ಆಫ್ರಿಕಾ
13. ಬೆಂಗಳೂರು ಲಾಲ್‌ಬಾಗ್
14. ಪಿ.ವಿ.ನರಸಿಂಹರಾವ್
15. 29.

ನಿನ್ನ ಸೇವಕನಾದ ನನ್ನ ಮೇಲೆ ದಯವಿಡು; ಆಗ ಜೀವದಿಂದಿದ್ದು ನಿನ್ನ ವಾಕ್ಯವನ್ನು ಕೈಕೊಳ್ಳುವೆನು (ಕೀರ್ತ. 119:17).